ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

# ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ, ಎನ್.ಸಿ.ಟಿ.ಇ.ಯ ಮಾನ್ಯತೆ, ಯು.ಜಿ.ಸಿ ಅಧಿನಿಯಮ 2(f), ಸೆಕ್ಷನ್ 12(B) ಮನ್ನಣೆ ಪಡೆದಿದೆ ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿಗೆ "B" ಶ್ರೇಣಿ ಮಾನ್ಯತೆ ಹೊಂದಿದೆ)

ಶಿವಮೊಗ್ಗ ರಸ್ತೆ ಶಿಕಾರಿಪುರ–577 427 ಶಿವಮೊಗ್ಗ ಜಿಲ್ಲೆ

**Phone : 08187 – 222383, 222067** **E-Mail: kumadvathibed@gmail.com**

# ಸಮಾಜ ವಿಜ್ಞಾನ ಸಂಘ –2018

## Social Science Club -2018




# ಲೇಖನಗಳ ಸಂಗ್ರಹ

**"ಇತಿಹಾಸ ತಿಳಿದವರು ಇತಿಹಾಸ ಸೃಷ್ಟಿಸಬಲ್ಲರು"**

# ಸಮಾಜ ವಿಜ್ಞಾನ ಸಂಘ

ರಾಷ್ಟ್ರಪತಿಗಳು



**ಡಾ. ಜಯಶ್ರೀ ವಿ. ರಕ್ಕಸಗಿ**
**ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

ಪ್ರಧಾನ ಮಂತ್ರಿಗಳು



**ಶ್ರೀ ದೇವರಾಜ ವೈ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

ಉಪ ಪ್ರಧಾನ ಮಂತ್ರಿಗಳು



**ಡಾ. ವಾಣಿನಾಯಕಿ ಡಿ.ಸಿ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

## ಸಭಾ ಪತಿಗಳು



ಇಂದಿರಾ ವೈ.

ಪ್ರಶಿಕ್ಷಣಾರ್ಥಿ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ಮಂತ್ರಿ ಮಂಡಲ

ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ನಾಲ್ಕನೇ ಸೆಮಿಸ್ಟರ್

    

    



## ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ಎರಡನೇ ಸೆಮಿಸ್ಟರ್



# ಪರಿವಿಡಿ


| ಕ್ರಮ ಸಂಖ್ಯೆ | ವಿಷಯಾಂಶ | ಪುಟ ಸಂಖ್ಯೆ |
|---|---|---|
| 1 | ಮಯೂರ ಸಿಂಹಾಸನ | 7 |
| 2 | ಭಾರತದಲ್ಲಿ ಮಹಿಳೆಯರ ಸ್ಥಾನಮಾನ | 8–9 |
| 3 | ಸ್ನೇಹದ ಕಡಲಿಗೆ ಹಂಬಲಿಸಿದೆ ಮನ | 10 |
| 4 | ಮನಸ್ಸೆಂಬ ಕನ್ನಡಿ | 11 |
| 5 | ಇತಿಹಾಸದಲ್ಲಿ ಹೊಸ ಸಂಶೋಧನೆಗಳು | 12 |
| 6 | ಭ್ರಷ್ಟಾಚಾರದ ಬಿಸಿ | 13 |
| 7 | ಕೊಹಿನೂರ್ ವಜ್ರ | 14 |
| 8 | ತಾಜ್‌ಮಹಲ್ | 15 |
| 9 | ಸ್ವಾತಂತ್ರ್ಯ | 16 |
| 10 | ವೈವಿಧ್ಯತೆಯಲ್ಲಿ ಏಕತೆ – ಭಾರತ ರಾಷ್ಟ್ರ | 17–18 |
| 11 | ಜಲಿಯನ್ ವಾಲಾಬಾಗ್ ದುರಂತ | 19–20 |
| 12 | ಗಾಂಧೀತಾತ | 21 |
| 13 | ಮೆರವಣಿಗೆ | 22 |
| 14 | ಮಹಿಳೆಯರ ಬಗ್ಗೆ ಸಾರ್ವಜನಿಕರಿಗೆ ಇರಬೇಕಾದ ಮಾಹಿತಿಗಳು: | 23 |
| 15 | ಭ್ರಷ್ಟಾಚಾರ – ಒಂದು ಸಾಮಾಜಿಕ ಪಿಡುಗು | 24–25 |
| 16 | 1987ರಲ್ಲಿ25ನೇರಾಜ್ಯವಾಗಿ ಗೋವಾ | 26 |
| 17 | 1986–ರಾಷ್ಟ್ರೀಯ ನೀತಿಗಳು | 27 |

| | | |
|---|---|---|
| 18 | ರಾಷ್ಟ್ರೀಯ ಚಿಹ್ನೆಗಳು | 28 |
| 19 | ಬಾಲ್ಯದಲ್ಲಿ ಬರಬೇಕಾದ ಶಿಸ್ತು | 29–30 |
| 20 | ಏಳಿರಿ ಏಳಿರಿ ಎದ್ದೇಳಿರಿ | 31 |
| 21 | ವ್ಯಕ್ತಿ ಸಂಪನ್ನ ಗೊಂಡರೆ ರಾಷ್ಟ್ರ ಸಂಪತ್ತು | 32 |
| 22 | ಚೀನಾ ಮಹಾಗೋಡೆ | 33 |
| 23 | ಎಲ್ಲಿಹರು ನಾಯಕರು | 34 |
| 24 | ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ | 35–36 |
| 25 | ಮೊಬೈಲ್ ಸಾಮ್ರಾಜ್ಯ | 37–38 |
| 26 | ಚಿತ್ತರಂಜನ ದಾಸ್ | 39 |
| 27 | ಅನ್ನಿಬೆಸೆಂಟ್ | 40 |
| 28 | ಗಂಗಾನದಿಯ ಶುದ್ಧೀಕರಣ | 41 |
| 29 | ಪ್ರಮುಖ 60 ಪಿತಾಮಹರುಗಳು | 42–44 |
| 30 | ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತ ಸೈನಿಕರು | 45 |
| 31 | ಭಾರತದ ಮತ ಪ್ರವರ್ತಕರು | 46 |
| 32 | ಒಂದು ಡಾಲರಗೆ ಒಂದು ರೂಪಾಯಿ ಯಾವಾಗ? | 47 |
| 33 | **Anegudde Lord Shri Vinayaka Temple** | 48 |
| 34 | **Ibrahim Rauza** | 49 |

## ಮಯೂರ ಸಿಂಹಾಸನ

ಷಹಜಹಾನನ ಕಾಲದ ಮತ್ತೊಂದು ಖ್ಯಾತ ಕಲಾಕೃತಿಯೆಂದರೆ ಮಯೂರ ಸಿಂಹಾಸನ ಇದನ್ನು ಏಳು ವರ್ಷಗಳ ಅವಧಿಯಲ್ಲಿ ಅಂದಿನ ಒಂದು ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲಾಗಿತ್ತು. "ಸಿಂಹಾಸನ ಸುವರ್ಣ ಪಾದಗಳ ಮೇಲೆ ನಿಂತ ತೂಗು ಮಂಚದಂತಿತ್ತು".

ಈ ಲೇಪಿತವಿಕಾಸಕ್ಕೆ ಹನ್ನೆರಡು ಮರಕತ ಸ್ತಂಭಗಳ ಆಧಾರವಿತ್ತು. ಪ್ರತಿಯೊಂದು ರತ್ನಗಳಿಂದ ಮೇಲ್ಪದರ ನೀಡಲಾಗಿದ್ದ ಎರಡು ನವಿಲುಗಳನ್ನು ಹೊಂದಿತ್ತು. ಪ್ರತೀ ಜೊತೆ ಪಕ್ಷಿಗಳ ನಡುವೆ ವಜ್ರಗಳು, ಮಾಣಿಕ್ಯ ಹಾಗೂ ಹವಳಗಳಿಂದ ಕೂಡಿದ ಒಂದು ವೃಕ್ಷವಿತ್ತು". ನಾದಿರ್‌ಷಾನು ಭಾರತ ಮೇಲೆ ಕ್ರಿ.ಶ 1739 ರಲ್ಲಿ ದಂಡೆತ್ತಿ ಬಂದಾಗ ಮಯೂರ ಸಿಂಹಾಸನವನ್ನು ಪರ್ಷಿಯಾಕ್ಕೆ ಕೊಂಡೊಯ್ದ .ಆದರೆ ದುರಾರ್ದೃಷ್ಟವಶಾತ್ ಅದು ಪ್ರಪಂಚದಲ್ಲಿ ಮತ್ತೆ ಎಲ್ಲಿಯೂ ಕಂಡು ಬಂದಿಲ್ಲ. ಈ ಸಿಂಹಾಸನದ ಚಿತ್ರಕಲೆಯು ಅತ್ಯಂತ ಸೂಕ್ಷ್ಮವಾದ ಕೆತ್ತನೆಯಿಂದ ಮಾಡಲಾಯಿತು ಎಂದು ಹೇಳಲಾಗುತ್ತದೆ.

ಇವತ್ತಿಗೂ ಆ ಸಿಂಹಾಸನವನ್ನು ಯಾರು ನೋಡಿಲ್ಲ. ಈ ಸಿಂಹಾಸನವನ್ನು ಭವ್ಯವಾಗಿ ನಿರ್ಮಾಣ ಮಾಡಲಾಯಿತು ವಿಶ್ವ ವಿಖ್ಯಾತಿ ಮಯೂರ ಸಿಂಹಾಸನವನ್ನು ಪರ್ಷಿಯಾದ ನಾದಿರ್‌ಷಾ ಯುದ್ಧವನ್ನು ಗೆದ್ದು ತನ್ನ ರಾಜ್ಯವಾದ ಪರ್ಷಿಯಾಕ್ಕೆ ಕೊಂಡೊಯ್ದನು. ಸುಂದರವಾದ ಸಿಂಹಾಸವನ್ನುಕಳೆದುಕೊಂಡೆವು.



ಅಕ್ಷತಾ ಸಿ ಗೌಡ
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಭಾರತದಲ್ಲಿ ಮಹಿಳೆಯರ ಸ್ಥಾನಮಾನ

ಪ್ರತಿಯೊಂದು ಘಟ್ಟದಲ್ಲೂ ಮಹಿಳೆ ತಾನು ಅಬಲೆಯಲ್ಲ,ಸಬಲೆ ಎಂಬುದನ್ನು ಸಾಧಿಸಿ ತೋರಿದ್ದಾಳೆ. ಎಲ್ಲಿ ಹೆಣ್ಣನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ಕಾಣಿಸಿಕೊಳ್ಳುತ್ತಾರೆ ಎಂಬುದು ಒಂದು ವಾಡಿಕೆಯಾಗಿದೆ. ಎಂತಹಕೆಲಸವನ್ನೆ ಆಗಲಿ ಸಮರ್ಪಕವಾಗಿ ನಿಭಾಯಿಸುವ ಶಕ್ತಿಯು ಆಕೆಯದು. ಪ್ರಕೃತಿಯ ವಿಶೇಷ ಸೃಷ್ಠಿಯೇ ಮಹಿಳೆ. ಆಧುನಿಕ ಯುಗದಲ್ಲಿ ಆಕೆ ತನ್ನನ್ನು ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ಸಹ ತೊಡಗಿಸಿಕೊಂಡಿದ್ದಾಳೆ.ತನ್ನ ಸಾಮರ್ಥ್ಯವನ್ನು ಪ್ರಾಬಲ್ಯವನ್ನು ಮೆರದಿದ್ದಾಳೆ. ಒಳಗಿನ ಮತ್ತು ಹೊರಗಿನ ಕೆಲಸಗಳೆರಡನ್ನೂ ಶ್ರೇಣಿಕರಿಸದೆ ಸಮಾನ ಆಸಕ್ತಿಯಿಂದ , ಸಮಾನ ಪ್ರೀತಿಯಲ್ಲಿ, ಸಮಾನ ದಕ್ಷತೆಯಲ್ಲಿ ನಿಭಾಯಿಸುವ ಈ ಗುಣವೇ ಸ್ತ್ರೀಯಲ್ಲಿರುವ ವೈಶಿಷ್ಠತೆ.

ಸ್ತ್ರೀಯು ಕಾರ್ಯಪ್ರವೃತ್ತಳಾದಾಗ ಯಾವ ಗುಣ ಅಧಿಕ ಪ್ರಮಾಣದಲ್ಲಿರುವುದೋ ಆ ಗುಣ ಸ್ವಭಾವವಾಗಿ ಅಭಿವ್ಯಕ್ತವಾಗುತ್ತದೆ.ಹೆಣ್ಣು ತಾಯಿಯಾದಾಗ ಅವಳಲ್ಲಿರುವ ನೈಜ ಮನೋಗುಣ ಜಾಗೃತವಾಗುವುದು. ಮಗುವನ್ನು ಸಾಕಿ–ಸಲಹಿ, ಜವಾಬ್ದಾರಿಯುತ ವ್ಯಕ್ತಿಗಳನ್ನಾಗಿ ಮಾಡುವಲ್ಲಿ ಪುರುಷನಿಗಿಂತ ಸ್ತ್ರೀಯು ಕೈಂಕರ್ಯವೇ ಹಿರಿದು.

ಇಂತಹ ಹಲವಾರು ರೀತಿಯ ಗುಣಗಳನ್ನು ಹೊಂದಿರುವ ಮಹಿಳೆಗೆ ಭಾರತದಲ್ಲಿ ನೀಡಿರುವ ಸ್ಥಾನಗಳು ಏನು ಎಂಬುದು ಕಂಡು ಬರುವ ಒಂದು ಅಂಶವಾಗಿದೆ. ಇತ್ತೀಚಿಗೆ ಭಾರತದಲ್ಲಿ ಮಹಿಳೆಯರು ಶಿಕ್ಷಣ,ರಾಜಕೀಯ, ಮಾಧ್ಯಮ, ಕಲೆ, ಸಾಂಸ್ಕೃತಿಕ, ಸೇವಾ ವಿಭಾಗಗಳು,ವಿಜ್ಞಾನ ಮತ್ತು ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ. ಭಾರತೀಯ ಸಂವಿಧಾನವು ಮಹಿಳೆಯಲ್ಲರಿಗೂ ಸಮಾನತೆ, ರಾಜ್ಯದಿಂದ ತಾರತಮ್ಯವಿರಕೂಡದು. ಸಮಾನ ಅವಕಾಶ ಇತ್ಯಾದಿಗಳು ಖಾತ್ರಿಗೊಳಿಸಿದೆ. ಇಷ್ಟಲ್ಲದೆ ರಾಜ್ಯಗಳು ಮಹಿಳೆಯರು ಮತ್ತು ಮಕ್ಕಳ ಪರವಾಗಿ ಹಲವು ರೀತಿಯ ಸವಲತ್ತುಗಳನ್ನು ಒದಗಿಸಿದೆ. ಮಹಿಳೆಯರಿಗೆ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದೆ. ಕೆಲಸದ ವಾತಾವರಣ ಮತ್ತು ಮಾತೃತ್ವದ ಸವಲತ್ತುಗಳನ್ನು ಭದ್ರತೆ ನೀಡುವಂತಹ ಅವಕಾಶಗಳನ್ನು ಕಲ್ಪಿಸಿದೆ.

ಭಾರತದಲ್ಲಿ 1970ನೇ ಇಸವಿಯಲ್ಲಿ ಸ್ತ್ರೀವಾದವು ಶೀಘ್ರಗತಿಯಲ್ಲಿ ಮೊದಲಾಯಿತು. ರಾಷ್ಟ್ರಮಟ್ಟದಲ್ಲಿ ಮಹಿಳಾ ಗುಂಪುಗಳು ಮೊಟ್ಟ ಮೊದಲನೆಯದಾಗಿ ಕೈಗೆತ್ತಿಕೊಂಡ ವಿಷಯವೇನೆಂದರೆ ,ಮಧುರೈಯಲ್ಲಿ ನಡೆದ ಬಲತ್ಕಾರದ ಪ್ರಕರಣ ಮಧುರೈಯಲ್ಲಿ ಹದಿ–ಹರೆಯದ ವಯಸ್ಸಿನ ಹೆಂಡತಿಯನ್ನು ಬಲತ್ಕಾರವಾಗಿ ಮಾನಭಂಗ ಮಾಡಿದ ಪೋಲಿಸ್ ಪೇದೆಯನ್ನು ನಿರಪರಾಧಿ ಎಂದು ಘೋಷಿಸಿದ್ದು . 1979–1980ರಲ್ಲಿ ದೊಡ್ಡ ಪ್ರಮಾಣದಲ್ಲಿ ವಿರೋಧವನ್ನು ವ್ಯಕ್ತಪಡಿಸಲು ಕಾರಣವಾಯಿತು.ಸ್ತ್ರೀವಾದಿಗಳು ಮಹಿಳೆಯರು ಕುರಿತು ಇರುವ ವಿವಾದಗಳಾದ

ಹೆಣ್ಣು ಮಗುವಿನ ಭ್ರೂಣಹತ್ಯೆ,ಲಿಂಗಭೇದ, ಮಹಿಳೆಯರು ಆರೋಗ್ಯ ಮತ್ತು ಸಾಕ್ಷರತೆಗಾಗಿ ಒಗ್ಗಟ್ಟಾಗಿ ಕೆಲಸ ಮಾಡಿದರು. ಭಾರತದಲ್ಲಿ ಕುಡಿತವು ಮಹಿಳೆಯ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿರುವುದರಿಂದ ಮಹಿಳಾ ಗುಂಪುಗಳು ಕುಡಿತದ ವಿರುದ್ಧ ಆಂಧೋಲನಗಳನ್ನು ಆಂಧ್ರಪ್ರದೇಶ, ಹರಿಯಾಣ, ಒರಿಸ್ಸಾ,ಮಧ್ಯಪ್ರದೇಶ ಮತ್ತು ಇತರೆ ರಾಜ್ಯಗಳಲ್ಲಿ ಆರಂಭಿಸಿದವು. ಬಹು ಮಂದಿ ಮುಸ್ಲಿಂ ಮಹಿಳೆಯರು, ಮುಸ್ಲಿಂ ಮೂಲದ ನಾಯಕರುಗಳು ಶೆರಿಯತ್ ಕಾನೂನಿನಲ್ಲಿ ಮಹಿಳೆಯರ ಹಕ್ಕುಗಳ ಅರ್ಥವಿವರಣೆ ಹಾಗೂ ಮೂರು ಬಾರಿ ತಲಾಕ್ ಹೇಳುವ ಪದ್ಧತಿಯ ಕುರಿತು ಟೀಕೆ ಮಾಡಿದ್ದಾರೆ.

1990 ರಲ್ಲಿ ವಿದೇಶಿ ದಾನಿ ಸಂಸ್ಥೆಗಳು ನೀಡಿದ ಅನುದಾನ ಹಣದ ಸಹಾಯದಿಂದ ಮಹಿಳಾ ವಿಕಸನ ಕುರಿತಾದ ಸರ್ಕಾರೇತರ ಸಂಸ್ಥೆಗಳನ್ನು ಸ್ಥಾಪಿಸಲು ಸಹಕಾರಿಯಾಯಿತು. ಸ್ವ ಸಹಾಯ ಸಂಘಗಳು,ಸ್ವಯಂ ಉದ್ಯೋಗಿಗಳ ಸಂಘದಂತಹ ಸರ್ಕಾರೇತರ ಸಂಘಟನೆಗಳು ಮಹಿಳೆಯರ ಹಕ್ಕುಗಳ ಬಗ್ಗೆ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಬಹಳ ಮಹಿಳೆಯರು ಸ್ಥಳೀಯ ಚಳುವಳಿಗಳ ಮುಖಾಂತರ ನಾಯಕಿಯಾಗಿ ಮುಂದೆ ಬಂದಿದ್ದಾರೆ. ಉದಾ :- ನರ್ಮದಾ ಬಚಾವ್ರೋ ಆಂದೋಲನ ಮೇಧಾ ಪಾಟ್ಕರರಂತವರು. ಭಾರತ ಸರ್ಕಾರವು 2001 ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷವೆಂದು ಘೋಷಿಸಲಾಯಿತು.



ದೀಪಿಕಾ ಡಿ
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಸ್ನೇಹದ ಕಡಲಿಗೆ ಹಂಬಲಿಸಿದೆ ಮನ

ಅದೇಕೋ ಸೂರ್ಯನು ಮುಂಜಾನೆ ಮರೆಯಾಗಿದ್ದ. ಬಾನಂಗಳದಲ್ಲಿ ಕರಿ ಮೋಡಗಳ ಚಿತ್ತಾರ ನನ್ನ ಮನಸೆಂಬ ಹಂದರದಲ್ಲಿ ಬೆಳ್ಳಗಿನ ಸೂರ್ಯ ಹುಟ್ಟಿರಲಿಲ್ಲ.,ಅಲ್ಲಿದ್ದದ್ದು ಕಪ್ಪು ಕಾರ್ಮೋಡ. ಕಪ್ಪು ಕಾರ್ಮೋಡಕರಗುವ ಸೂಚನೆಯೆ ಇಲ್ಲವಾಗಿತ್ತು ಈ ಮನಸ್ಸಿಗೆ.

ದಿನವು ಚೈತನ್ಯಚಿಲುಮೆಯಂತಿದ್ದ ಈ ನನ್ನ ಮುಗ್ದ ಮನಸ್ಸು ಮುಂಜಾನೆಯ ಹಕ್ಕಿಗಳ ಕಲರವವನ್ನು ಸ್ವಾಗತಿಸಲು ಹವಣಿಸುತ್ತಿದ್ದ ಈ ಮನಸ್ಸು ಮಾತ್ರ ಮೌನದೇವಿಗೆ ಶರಣಾಗಿತ್ತು.ನಮ್ಮ ಅಮೃತದಂತಹ ಸ್ನೇಹಸಿಂಚನದ ನಡುವೆ ಎರಡೂ ಮನಸ್ಸುಗಳ ಬೆಸುಗೆ ಇತ್ತು. ಕಾವ್ಯ ಕನ್ನಿಕೆಯಾದ ಮುಡಿಯನ್ನು ಏರಿದವಳು ನನ್ನ ಸ್ನೇಹಿತೆ. ಕಾವ್ಯ ಕಸ್ತೂರಿ ಗೊತ್ತಿಲ್ಲದವಳಿಗೆ ಬರೆಯುವ ಅಸ್ತ್ರವನ್ನು ಕಲಿಸಿಕೊಟ್ಟವಳು.ನನ್ನ ನೋವು ನಲಿವುಗಳಿಗೆ ಸ್ಪಂದಿಸುತ್ತಿದ್ದವಳು ಇದೆಲ್ಲ ನಂಮ್ಮಿಬ್ಬರ ಸ್ನೇಹಕ್ಕೆ ಸಾಕ್ಷಿಯಾಗಿತ್ತು. ಭಾವನಾಜೀವಿಯಾದ ನನ್ನ ಸ್ನೇಹದ ಲೋಕಕ್ಕೆ ಸ್ವಾಗತಿಸಿದವಳು ಎಲ್ಲೋ ಒಂದು ಸಮಯದಿ ಗುರುವಾಗಿ ನನ್ನ ತಪ್ಪುಗಳನ್ನು ತಿದ್ದಿದವಳು. ಜೀವನದ ಗೋತ್ತುಗುರಿಯನ್ನು ಮನದಟ್ಟುಮಾಡಿದವಳುಆಕೆ. ನನ್ನ ಮಾತಿನಲ್ಲಿ ಮಗುವಿನತೋತಲುನುಡಿ ಆಲಿಸುತ್ತಾ ನಗುವಿನಲ್ಲಿ ತನ್ನ ನಗುವನ್ನು ಕಾಣುತಿದ್ದವಳು. ನನ್ನ ಬದುಕಿಗೆ ಆದರ್ಶವ್ಯಕಿಯಾದ ಮಹಾನುಭಾವಳು.

ಆದರೆ ವಿಧಿಯುಮಾತ್ರ ನಮ್ಮಿಬ್ಬರ ಗೆಳೆತನವನ್ನು ದೂರಮಾಡಿತ್ತು. ಅದ್ಬುತವಾದ ಸ್ನೇಹಸಂಭದದ ನಡುವೆ ಮನಸ್ತಪವೆಂಬ ಅಸ್ತ್ರವನ್ನುವಿಟ್ಟಿತ್ತು. ವಿಧಿಯಗೋರರ್ತನಕ್ಕೆ ನಮ್ಮಿಬ್ಬರ ಸ್ನೇಹಸಂಭದ ಬಲಿಯಾಯಿತು. ಆದರೆ ಇಂದೆಕೋ ಆಕೆಯಜೋತೆಗೆ ಕಳೆದ ನೆನಮುಗಳೆ ನನಗೆ ರಾಯಭಾರಿ.ಸ್ನೇಹದ ಬೀಜಬಿತ್ತಿ ಮರವಾಗಿಬೆಳೆಸಿ ಮರೆಯಾಗಿದ್ದಾಳೆ.ಆಕೆಯ ನದುಕಿನ ಬಂಡಿಯನ್ನು ಸಾಗಿಸುತ್ತ ನನ್ನ ನೆನಪಿನಲ್ಲಿ ಬದುಕುತಿದ್ದಾಳೆಯೆಂಬ ಸತ್ಯದ ಅರಿವು ನನಗಿದೆ. ಮನಸ್ತಾಪವೆಂಬ ಅಸ್ತ್ರವನ್ನು ಕಿತ್ತೆಸೆದು ಮತ್ತೆ ಬರುವಳೆಂಬ ನಂಬಿಕೆಯಿದ್ದರು ಅದು ಬ್ರಾಂತಿಯಂತೆ ಭಾಸವಾಗುತ್ತದೆ.

ಕಳೆದುಕೋಳ್ಳಬಾರದೆಂದು ಕಳೆದುಕೋಂಡಿರುವ ಸ್ನೇಹಸಂಭದಕ್ಕೆ ಮರಗಿತಿದೆ ಈ ಮನ ಆಕೆ ಎಲ್ಲೆ ಇದ್ದರು ನಗುವೆ ಆಕೆಗೆ ಆಸರೆ ಯಾಗಲಿಯಂಬ ಕೊರಿಕೆ. ಆ ದೇವರಲ್ಲಿ ನನ್ನದು. ಸ್ನೇಹಸಂಭದದಲ್ಲಿ ಪ್ರಯಾಣಿಸಿ ಸ್ನೇಹವೆಂಬ ಕಡಲನ್ನು ದಾಟಿಸುವ ಮುನ್ನವೆ ಕೈಬಿಟ್ಟವಳು, ಅದೆಕೋ ದಡ ಸೇರಿಸದೆ,ಈಗ ಸ್ನೆಹದ ಕಡಲತಿರದಲ್ಲಿ ಅಲೆಗಳ ನೋಡುತ್ತಾ ನಿಂತಿರುವೆ. ತಿಳಿಯೆನು! ಮರಳಿಬರುವಳೆ ನನ್ನ ಬಾಳಿಗೆ ಸ್ನೇಹದ ಅಕ್ಷರವಾಗಿ ನಗುವನ್ನು ತರುವಳು. ಆದರೆ ಸ್ವಾರ್ಥತುಂಬಿದ ಮನಸ್ಸುಗಳ ನಡುವೆ ಸ್ವಾರ್ಥವಿಲ್ಲದ ಸ್ನೇಹದ ಅಮೃತವನ್ನು ಉಣಬಡಿಸಿದವಳು.ಇದೆ ಅಲ್ವಾ?ನಿಜವಾದ ಸ್ನೇಹ. ಸ್ನೇಹಸಭಂದಕ್ಕೆ ಸರಿಸಾಟಿ ಇನ್ನಾವುದು?



ಮೀನಾಕ್ಷಿ ಗಿರಿಸಿನಕೊಪ್ಪ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಮನಸ್ಸೆಂಬ ಕನ್ನಡಿ

ಮುಖದ ಅಂದವನ್ನು ನೋಡಬೇಕು ಅಂತ ಬಯಸಿತು ನನ್ನಿ ಮನಸ್ಸು, ಹಾಗೆ ನನ್ನ ಕಣ್ಣು ಸೆಳೆಯಿತು ಒಮ್ಮೆ ಕನ್ನೆಡಿಯತ,ಏನಾಯಿತು ನನಗೆ ಆ ಸಮಯದಲ್ಲಿ ಬಿತ್ತು ಕನ್ನಡಿ ನನ್ನ ಕೈಜಾರಿ, ಬಿತ್ತು ಬಿದ್ದ ಕನ್ನಡಿ ಈಗ ಹತ್ತು ಚುರಾಯಿತು. ಒಂದೊಂದು ಭಾಗ ಒಂದೊಂದು ಕಡೆಗೆ ಹುಚ್ಚು ಮನಸ್ಸಿನ ಹತ್ತಾರು ಮುಖಗಳು. ಜೋಡಿಸಲು ಬಯಸಿದೆ, ಆದರೆ ಭಯಾ ಅಂಜಿಕೆ ಆವರಿಸಿತ್ತು ಮನಸ್ಸಿನಲ್ಲಿ. ನನ್ನ ಮುಖವನ್ನು ನಾನೆ ಪುನಃ ನೋಡುವೆನಾ ಬದುಕಿನ ಹಾಗೆ?

ಬದುಕು ನಾವು ಯೋಚಿಸಿದಂತೆ ನಡೆಯುವುದಿಲ್ಲ. ಮುಂದೆ ಏನಾಗ ಬಹುದೊ ಎಂದು ಕಾದುನೋಡಬೇಕು. ಯನ್ನವ ಕುತುಹಲ. ಒಂದೊಂದು ಕ್ಷಣವು ಅನುಭವವೆಂಬ ಬತ್ತಳಿಕೆಯಲ್ಲಿ ತುಂಬುವಂತಹ ಬಾಣಗಳು ಬದುಕಿನ ಬಗ್ಗೆ ಯೋಚಿಸುತ್ತಾ ಇರುವಾಗ ನನ್ನೀ ಕಣ್ಣಿರಿಗೆ ಕಾರಣ ನನ್ನ ಕೈಗೆತಾಕಿದ ಕನ್ನಡಿಯ ಚುರೆಂದು ತಿಳಿಯಲೆಯಿಲ್ಲ. ರಕ್ತದ ಹನಿಗಳು ತುಂತುರು ಹನಿಯಂತೆ ನೆಲವನ್ನು ಚುಂಬಿಸುತಿದ್ದವು, ನನ್ನ ನೋವಿನ ಬಗ್ಗೆ ಯೋಚನೆಯೆ ಇಲ್ಲ... ಆದರೆ, ಮುಗಿದುಹೋದ ಕನ್ನಡಿಯ ಆಯಸ್ಸು ಮತ್ತೆ ಬರುತ್ತದೆಯೆ ಎಂದು ದುಃಖವಾಯಿತು. ಯೆದೆಯಾಳದಲ್ಲಿ ನೋವಿನ ಬೇರನ್ನು ಚುಗುರಿಸಿತು ಈ ಬದುಕು ಇಷ್ಟೆ.... ಆಗಿಹೋದ ಕಹಿ ಗಟನೆಗಳು ನಮ್ಮ ಕಣ್ಣು ಕೆಂಪು ಮಾಡುವದಾದರು, ಅದರ ರಂಗು ಕಾಲ ಕ್ರಮೇಣ ನಶಿಸುತ್ತದೆ. ಮತ್ತೆ ಅದೆ ಜೀವನ,ಕಾಲಚಕ್ರ, ಉರುಳುತ್ತಿರುತ್ತದೆ ಒಬ್ಬರ ದೋಣಿ ಮುಂದೆ ಇನ್ನೊಬ್ಬರದ್ದು ಹಿಂದೆ....
ದಡಸೇರಬೆಕಾದ್ದು ಇಷ್ಟೆನಾ ಜೀವನಾ?ಹೌದ.... ಇಷ್ಟೆಅಲ್ಲ.... ಇಷ್ಟೆ



ಮೀನಾಕ್ಷಿ ಗಿರಿಸಿನಕೊಪ್ಪ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಇತಿಹಾಸದಲ್ಲಿ ಹೊಸ ಸಂಶೋಧನೆಗಳು

ಇತಿಹಾಸ ಎಂದ ಕೂಡಲೇ ನಮಗೆ ನೆನಪಾಗುವುದು ಅಕ್ಬರ್ ಅಶೋಕ ಮುಂತಾದ ರಾಜರುಗಳು. ಚರಿತ್ರೆ ಎಂದರೆ ಬರೀ ಪುರಾಣ ಅದೇ  ಅಕ್ಬರ್ ಎಂದು ಲೇವಡಿ ಮಾಡುವ ಜನರಿಗೆ ಅದರ ಜ್ಞಾನ ತೀರಾ ಇತ್ತೀಚಿಗಿನದು ಎಂಬ ಅಂಶ ತಿಳಿದಿಲ್ಲ ಇತಿಹಾಸ ಕೇವಲ ರಾಜಕೀಯ ಘಟನೆಗಳ ಅಧ್ಯಯನಕ್ಕೆ ಸೀಮಿತವಾಗದೆ ಪರಿಪೂರ್ಣ ನಾಗರಿಕತೆಯ ಸೂಕ್ಷ್ಮ ಒಳನೋಟಗಳನ್ನು ನಮ್ಮ ಮುಂದೆ ತೆರೆದಿರುತ್ತದೆ, ಆಧುನಿಕ ಕಾಲ ಘಟ್ಟದ ಸುಸಂದರ್ಭದಲ್ಲಿ ಇತ್ತೀಚಿಗಿನ ಇತಿಹಾಸಕಾರರು ಹೊಸ ಹಾಗೂ ಪರಿಚಯವಿಲ್ಲದ ಕ್ಷೇತ್ರಗಳತ್ತ ಹೆಜ್ಜೆ ಇಡಿತ್ತಿರುವುದು ಮಹತ್ವದ ಅಂಶವಾಗಿದೆ ವಿಜ್ಞಾನ ತಂತ್ರಜ್ಞಾನ .ಮಹಿಳಾ ಇತಿಹಾಸ ಚಲನಚಿತ್ರ ಇತಿಹಾಸ ಹೀಗೆ ಇತಿಹಾಸದ ಸಂಶೋಧನೆಯ ವ್ಯಾಪ್ತಿ ತನ್ನ ಎಲ್ಲೇ ಮೀರಿ ಬೆಳೆಯುತ್ತಿದೆ

ಇತಿಹಾಸ ಸಂಶೋಧನೆಯ ಹೊಸ ಒಳನೋಟಗಲನ್ನು ಗಮನಿಸೋಣ

**ವಿಜ್ಞಾನ ಮತ್ತು ತಂತ್ರಜ್ಞಾನ ಇತಿಹಾಸ** : ಈ ಪರಿಕಲ್ಪನೆ ಮೊಟ್ಟಮೊದಲು ಕಾಣಿಸಿಕೊಂಡಿದ್ದು 18ನೇಯ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿಜ್ಞಾನದ ಹಲವು ರಂಗಗಳಲ್ಲಿ ಆದ ಬೆಳೆವಣಿಗೆಯನ್ನು ಮತ್ತೆ ಇವುಗಳಿಂದ ಉಂಟಾಗಿರುವ ಪ್ರಭಾವಗಳನ್ನು ವೈಜ್ಞಾನಿಕ ಮತ್ತು ತಂತ್ರಜ್ಞಾನೀಯ ಚಿಂತನೆಗಳನ್ನು ಪ್ರಮುಖ ಪರೀಕ್ಷಿಸಲಾಗಿದೆ. ಜೆ ಆಗಸ್ಸೆ ಬಂಡೆಲ್ ವಿ ಗ್ಲೋರ್ ಲೆಟ್ ಬಟರಫೀಲ್ಡ್ ಎಂಬ ಪ್ರಮುಖ ವಿದ್ವಾಂಸರು ಪಾಶ್ಯಿಮಾತ್ಯ ರಾಷ್ಟ್ರಗಳಲ್ಲಿ ಆದ ವೈಜ್ಞಾನಿಕ ಬಗ್ಗೆ  ರಚಿರುತ್ತಾರೆ ಭಾರತದಲ್ಲಿ ಈ ರಂಗದಲ್ಲಿ ಕೆಲಸ ಮಾಡಿದವರಲ್ಲಿ ಬಿ ಎನ್ ಸೀಲ್ ಪ್ರಮುಖರು

**ಪರಿಸರ ಮತ್ತು ವನ್ಯಜೀವಿ ಇತಿಹಾಸ** :ಮಾನವ ಕೇಂದ್ರಿತ ಅಧ್ಯಯನದಿಂದ ಮುಂದೆ ಹೋಗಿ ಪರಿಸರದ ಕ್ರಮ ಮತ್ತು ಸ್ವಾಭಾಮಿಕ ವಿಜ್ಞಾನಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇದಾಗಿದೆ. ಪರಿಸರ ಇತಿಹಾಸದ ಅಡಿಯಲ್ಲಿ ಅರಣ್ಯ ಕಾನೂನುಗಳು ಹಿಡುವಳಿಯ ಪದ್ಧತಿಗಳು ವ್ಯವಸಾಯ ಮೀನುಗಾರಿಕೆ ಮತ್ತು ಪರಿಸರ ಮಾಲಿನ್ಯದ ಅಧ್ಯಯನಗಳುನ್ನು ನಡೆಸಬಹುದಾಗಿದೆ

**ಚಲನಚಿಚತ್ರ ಇತಿಹಾಸ** :20 ಮತ್ತು 21ನೇಯ ಶತಮಾನದ ಜೀವನದ ಮೇಲೆ ಅತೀ ದೊಡ್ಡ ಪ್ರಭಾವ ಬೀರಿರುವ ಕೈಗಾರಿಕಾ ಕಲಾಪ್ರಕಾರವೆಂದರೆ ಅದು ಚಲನಚಿತ್ರ ಸಾಮಾನ್ಯ ತರದಲ್ಲಿ ಆರಂಭವಾದ ಈ ಕೈಗಾರಿಕೆ ಇಂದು ಕೋಟ್ಯಾಂತರ ರೂಪಾಯಿಗಳ ಉಧ್ಯಮವಾಗಿದೆ1930 ರಿಂದ ಮೂಲಕ ಚಲನಚಿತ್ರ ಆರಂಭಗೊಂಡಿತಾದಲೂ ಚಲನಚಿತ್ರದ ಇತಿಹಾಸದ 1935ಕ್ಕೆ ಹೋಗುತ್ತದೆ.

**ಮಹಿಳೆಯ ಇತಿಹಾಸ** :ಸ್ತ್ರೀ ವಾದ ಇತಿಹಾಸವು ಕಳೆದ 20ವರ್ಷಗಳಿಂದೀಚೆಗೆ ಒಂದು ವಿಶಿಷ್ಟವಾದ ಅಧ್ಯಯನ ಕ್ಷೇತ್ರವಾಗಿ ಬೆಳೆದುಬಂದಿದೆ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಶಾಸ್ತ್ರೀಯ ಅಧ್ಯಯನ ಶಾಸ್ತೀಯ ಅಧ್ಯಯನ ಕೇಂದ್ರಗಳಲ್ಲಿ  ಸ್ತ್ರೀ ಇತಿಹಾಸ ಅಧ್ಯಯನಕ್ಕೆ ನೀಡಿರುವ ಶೈಕ್ಷಣಿಕ ಆಧ್ಯತೆಯೇನೂ ಅಷ್ಟೆಂದು ಮುಖ್ಯವಲ್ಲದಿದ್ದರೂ ಪ್ರಪಂಚದ ವಿವಿದೆಡೆಗಳಲ್ಲಿ ಸ್ತ್ರೀಯರ ಇತಿಹಾಸವೇಯಿದೆ.



ಅಶ್ವಿನಿ ಹೆಚ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಭ್ರಷ್ಟಾಚಾರದ ಬಿಸಿ

ಬಾನಂಗಳದ ನೀಲಿ ಆಕಾಶದಲಿ ಮಿನುಗುವ ಚಂದ್ರನಂತೆ ಮಿನುಗುವಾಸೆ ,ಈ ನನ್ನ ಸಮಾಜದಲ್ಲಿ ಮಿನುಗಲು ಸಾಧ್ಯವೇ? ಕಳ್ಳ–ಕಾಕರ ಸಂತೆಯಲ್ಲಿ. ನಿಸ್ವಾರ್ಥ ಬದುಕು ಕಟ್ಟಬೇಕೆಂಬ ಆಸೆ ಹೊತ್ತಿರುವೆ,ಸ್ವಾರ್ಥ ತುಂಬಿರುವ ಸಮಾಜದಲ್ಲಿ ನಿಸ್ವಾರ್ಥ ಅಡಗಿ ಕುಳಿತಿರುವುದು ಯಾವುದೋ ಮನೆಯ ಮೂಲೆಯಲಿ.

ನವೇ ಭ್ರಷ್ಟಚಾರವನ್ನು ನಿರ್ಮಾಣ ಮಾಡಿದಾಗ ನಾವೇ ಇವರೇ ನಮ್ಮ ನಾಯಕರಾಗಲು ಸರಿಯಾದ ವ್ಯಕ್ತಿ ಎಂದು ಆರಿಸಿದವರೆ ಭಷ್ಟಾಚಾರದ ಮಾನದಂಡವನ್ನು ಹಿಡಿದು ಕುಳಿತಾಗ ಭಷ್ಟಾಚಾರಿಗಳೆಂದು ಕರೆಯುವದಾದರು ಯಾರನ್ನು.?ಆಯ್ಕೆ ಮಾಡಿದ ನವು ಭ್ರಷ್ಟರೆ?ಅಥವಾ ಆಯ್ಕೆಯಾಗಿ ಅಧಿಕಾರ ಸ್ವಿಕರಿಸಿದ ತಕ್ಷಣ ಮಾನವಿಯತೆಯನ್ನು ಮರೆತು ಲಾಭಗಳಿಸುವ ವ್ಯವಹಾರ ಮಾಡಲು ನಿರ್ಧರಿಸಿದ ನಮ್ಮ ಅಧಕಾರಿಗಳು ಭ್ರಷ್ಟರೋಎಂಬ ಗೋಂದಲ ಏಷ್ಟೋ ದಿನಗಳಿಂದ ಪ್ರಶ್ನೆಯಾಗಿಏಏ ಉಳಿದಿದೆ

ಎಷ್ಟೆ ಕಷ್ಟ ಪಟ್ಟು ಪರೀಕ್ಷೆಯನ್ನು ಪಾಸಾಗಿ ಪದವಿಯ ಸರಮಾಲೆಯನ್ನು ಕೊರಳಿನಲ್ಲಿ ಹಾಕಿಕೊಂಡರು, ಬಟ್ಟೆಯ ಅಂಗಡಿಯಲ್ಲಿ ತೂಗು ಹಾಕಿರುವ ಬೆಲೆಯ ಪಲಕದಂತೆ ಈ ಉದ್ಯೋಗಕ್ಕೆ ಇಷ್ಟು ಲಕ್ಷ ಎಂದು ತೂಗು ಫಲಕವನ್ನು ತೂಗು ಹಾಕಿದಾಗ ಪದವಿಗಳ ಸರಮಾಗೆ ಯಾವ ಬೆಲೆಯು ಇಲ್ಲದೆ ಶಿಕ್ಷಣದ ಮೌಲ್ಯ ಕಳೆದು ಹೊಗಿದೆ.

ನಾವು ವಾಸಿಸುವ ಸಮಾಜ ನನ್ನ ಮನೆ ನಾನು ಲಂಚ ಕೆಳುತ್ತಿರುವ ವ್ಯಕ್ತಿಗಳು ನನ್ನ ಮನೆಯ ಸದಸ್ಯರೆಂಬ ಅರಿವಿಲ್ಲದೆ ಭ್ರಷ್ಟಾಚಾರವೆಂಬ ಮದವೇರಿದ ಆನೆಯನ್ನು ಹತ್ತಿ ಸವಾರಿ ಮಾಡುತ್ತಿರುವ ಅಧಿಕಾರಿಗಳು ಪಢೆದಿರುವ ಶಿಕ್ಷಣದ ಮೌಲ್ಯವಾದರು ಕಳೆದು ಹೊಗಿರುವುದೆಲ್ಲಿ? ಭ್ರಷ್ಟಾಚಾರವನ್ನು ನಿರ್ಮಲನೆ ಮಾಡಬೇಕು ಎಂದು ಎರಡು ಮೂರು ಪುಟಗಳ ಪರೀಕ್ಷೆ ಬರೆದು ರ್‍ಯಾಂಕ್ ವಿದ್ಯಾರ್ಥಿಗಳೇ ಅಧಿಕಾರ ಬಂದಾಕ್ಷಣ ಭ್ರಷ್ಟಾಚಾರದ ಹೊಳೆಯಲ್ಲಿ ಬಿದ್ದು ಹೋರಳಾಡುತ್ತಿರುವಾಗ ಶಿಕ್ಷಣ ಪಡೆಯುವುದರ ಅವಶ್ಯಕತೆಯಾದರು ಎನು ಎಂಬ ಪ್ರಶ್ನೇಗಳು ಮನಸ್ಸಿನಲ್ಲಿಯೆ ಉತ್ತರಕಗಿ ಹವಣಿಸುತ್ತಿವೆ

ದೇಶದ ಪ್ರಗತಿ ನನ್ನ ಹೋಣೆ .ನಾನು ಪಡೆದಿರುವ ಶಿಕ್ಷಣದ ಮೌಲ್ಯವನ್ನು ಉಳಿಸಬೇಕು ಎಂಬ ಭಾವನೆ ಪರತಯೋಬ್ಬರಲ್ಲು ಬರಬೇಕು .ದೇಶ ನನಗಾಗಿ ಏನು ಮಾಡಿದೆ ಎಂಬುವದಕಿಂತ ದೇಶಕ್ಕೋಸ್ಕರ ನಾನೇನಾದರು ಮಾಡಬೇಕು ಎಂಬ ಭಾವನೆ ಪರತಿಯೊಬ್ಬರ ಮನಸ್ಸಿನಲ್ಲು ಮೂಡಿದಾಗ ಮಾತ್ರ ಭ್ರಷ್ಟಾಚಾರ ನಮೂರ್ಲನೆಯಾಗಿ ನೆಮ್ಮದಿಯ ಉಸಿರಾಟ ನೆಏಸಬಹುದು



ಚೈತ್ರ ಎಲ್ ಹೆಚ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಕೊಹಿನೂರ್ ವಜ್ರ**

ಕೊಹಿನೂರು ವಜ್ರವು ಮೂಲತ: ಗೋವಲಕೊಂಡದ ಕಣಿವೆಯಲ್ಲಿ ದೊರೆತಿದ್ದು. ಗ್ವಾಲಿಯರ್‌ದ ರಾಜಾ ವಿಕ್ರಮ್‌ಜೀತ್‌ನಿಗೆ ಸೇರಿತ್ತು. 1526 ರ ಮೊದಲನೇಯ ಪಾಣಿಪತ್ ಕಾಳಗದಲ್ಲಿ ದೆಹಲಿಯ ದೊರೆ ಇಬ್ರಾಹಿಂ ಲೋದಿಯ ಪರವಾಗಿಹೋರಾಡಿ ವೀರಮರಣ ಹೊಂದಿದ ವಿಕ್ರಮ್‌ಜೀತ್ ಕುಟುಂಬ ವರ್ಗವನ್ನುಮೊಗಲ್‌ದೊರೆ ಹುಮಾಯುನ್ ಅತ್ಯಂತ ಗೌರವಯುತವಾಗಿ ಕಂಡನು.

ಇದರಿಂದ ಸಂತೃಪ್ತರಾದಅವರುಹುಮಾಯುನ್‌ನಿಗೆ ವಿಶ್ವವಿಖ್ಯಾತ ಕೊಹಿನೂರ್ ವಜ್ರವನ್ನು ಉಡುಗೊರೆಯಾಗಿಕೊಟ್ಟರು ಕದನದಲ್ಲಿ ವಿಜೇತನಾಗಿ ಮೇ 10 ರಂದು ಆಗ್ರಾ ಅರಮನೆಯನ್ನುಪ್ರವೇಶಿಸಿದ ಬಾಬರನಿಗೆ ಭವ್ಯಸ್ವಾಗತ ನೀಡಿದ ಹುಮಾಯುನ್ "ಇಡೀ ಜಗತ್ತಿನಅರ್ಧದಿನದ ವೆಚ್ಚಕ್ಕೆ ಸಮನಾದ ಬೆಲೆಯುಳ್ಳ ಕೊಹಿನೂರ್ ವಜ್ರ"ವನ್ನು ಕಾಣಿಕೆಯಾಗಿನೀಡಿದನು.

ಹೀಗೆ ವಜ್ರವು ಮೊಗಲ್ ಸಾಮ್ರಾಜ್ಯ ಸೇರಿತು. ಅದು ಷಹಜಹಾನ್‌ನಿಂದಮಹಮ್ಮದ್ ಷಾನ ಕಾಲದವರೆಗೂ ಮೊಗಲ ಸಾಮ್ರಾಜ್ಯದ ಗೌರವವನ್ನುಹೆಚ್ಚಿಸಿತು. ನಂತರ ಪರ್ಶಿಯಾದ ನಾದಿರ್ ಷಾನು ಭಾರತದ ಮೇಲೆ ಕ್ರಿ.ಶ 1739 ರಲ್ಲಿ ದಾಳಿ ಮಾಡಿದಾಗ ಮಹಮ್ಮದ್ ಷಾನನ್ನು ಸೋಲಿಸಿ ಜಗತ್ಪ್ರಸಿದ್ಧ ಕೊಹಿನೂರ್ ವಜ್ರವನ್ನುಪರ್ಶಿಯಾಕ್ಕೆ ಸಾಗಿಸಿದನು.

ಅಲಿಂದ ಕಾಬುಲ್‌ಶಾಹ ಶೋಜಾನ್ ಕೈಸೇರಿ ಪಂಜಾಬಿನ ರಣಜಿತ್ ಸಿಂಹನ ನಂತರ ದಿಲೀಪ್ ಸಿಂಗನ ಬಳಿ ಸೇರಿತು.1849 ರಲ್ಲಿ ಲಾರ್ಡ್‌ಡಾಲ್ ಹೌಸಿ ದಿಲೀಪ್ ಸಿಂಗನನ್ನು ಸೋಲಿಸಿ ಕೋಹಿನೂರ್ ವಜ್ರವನ್ನು ವಶಪಡಿಸಿಕೊಂಡನು ಅದು ಅಲ್ಲಿಂದ ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳ ಖಜಾನೆಯಲ್ಲಿ ಭದ್ರ ನೆಲೆಯಾಯಿತು.ಇಂದುಲಂಡನ್‌ವಸ್ತುಸಂಗ್ರಹಾಲಯದಲ್ಲಿ ನೋಡುಗರನ್ನು ಆಕರ್ಷಿಸುತ್ತದೆ.



ದ್ರಾಕ್ಷಾಯಿಣಿ ಕಾಗೇರ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ತಾಜ್‌ಮಹಲ್

ಷಹಜಹಾನನ ಕಾಲವು ಭಾರತದಲ್ಲಿ ಮೊಗಲ್ ಸಾಮ್ರಾಜ್ಯದ ಸುವರ್ಣಯುಗವಾಗಿತ್ತೆಂದು ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಷಹಜಹಾನನ ಕಾಲದಲ್ಲಿ ಅಪೂರ್ವವಾದ ಕಲೆ ಮತ್ತು ವಾಸ್ತುಶಿಲ್ಪ ಅಭಿವೃದ್ಧಿಗೊಂಡಿತು.ದೆಹಲಿ,ಆಗ್ರಾ,ಫತ್ತೇಪುರ, ಲಾಹೋರ, ಕಾಬೂಲ್, ಕಾಶ್ಮೀರ್, ಅಜ್ಮೀರ್ ಮುಂತಾದ ಕಡೆ ನಿರ್ಮಾಣಗೊಂಡ ಮಹಲ್‌ಗಳು, ಮಸೀದಿಗಳು, ಮೊಗಲ್ ವಾಸ್ತುಶಿಲ್ಪ ಬೆಳವಣಿಗೆಯ ಪರಾಕಾಷ್ಠತೆಯ ಪ್ರತೀಕಗಳಾಗಿವೆ ಆ ಕಾರಣವಾಗಿ ಷಹಜಹಾನ್‌ನನ್ನು "ಸೌಧಗಳ ನಿರ್ಮಾಪಕರ ರಾಜ" ಎಂದೇ ಕರೆಯಲಾಗಿದೆ,

ಷಹಜಹಾನ್‌ನು ತನ್ನ ಪ್ರೀತಿಯ ಪತ್ನಿ ಮುಮ್ತಾಜ್ ಮಹಲ್‌ಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ವಿಷಯವನ್ನು ಜಗತ್ತಿಗೆ ಸಾರಿ ಹೇಳಲು ಅವಳ ಸವಿ ನೆನಪಿನ ಸ್ಮಾರಕವಾಗಿ ಸುಪ್ರಸಿದ್ಧ ತಾಜ್‌ಮಹಲ್‌ನ್ನು ಆಗ್ರಾದ ಯಮುನಾ ನದಿಯ ತೀರದಲ್ಲಿ ನಿರ್ಮಿಸಿದನು.

ಅದು ಮುಮ್ತಾಜ್ ಮಹಲ್‌ಳ ಸಮಾಧಿಯ ಮೇಲೆ ಅವಳಿಗಾಗಿ ನಿರ್ಮಾಣಗೊಂಡಿದ್ದರಿಂದ 'ತಾಜ್‌ಮಹಲ್' ಎಂಬುದು ಅವಳ ಹೆಸರಿನ ಅಪಭ್ರಂಶವಾಗಿದೆ, ಷಹಜಹಾನನು ಪ್ರೀತಿಯ ಪತ್ನಿ ಮುಮ್ತಾಜ್ ಮಹಲ್ ಮರಣ ಹೊಂದಿದಾಗ ಪುಟ್ಟ ಮಗುವಿನಂತೆ ಅತ್ತನಂತೆ. ಜಗತ್ತಿನ ಯಾವುದೇ ಸ್ತ್ರೀಯು ಮುಮ್ತಾಜ್ ಮಹಲ್‌ನಂತೆ ಪ್ರೀತಿಯನ್ನು ತನ್ನ ಗಂಡನಿಂದ ಪಡೆದಿಲ್ಲ  ಎಂಬುದಕ್ಕೆ ತಾಜ್‌ಮಹಲ್ ಸಾಕ್ಷಿಯಾಗಿದೆ.

ತಾಜ್‌ಮಹಲ್ ವಿನ್ಯಾಸವನ್ನು ಇಟಲಿ ದೇಶದ ವೆನಿಷಿಯಾ ನಗರದ ಪಿರೊನಿಯಾ ಎಂಬ ಪ್ರಧಾನಶಿಲ್ಪಿ ರೂಪಿಸಿದನು. ಉಸ್ತಾದ್ ಈಸ್ ಎಂಬ ಶಿಲ್ಪಿಯ ನಿರ್ದೇಶನದಲ್ಲಿ 20.000 ಪರ್ಶಿಯನ್, ಏಷಿಯಾ ಮತ್ತು ಭಾರತೀಯ ಶಿಲ್ಪಿಗಳ 20 ವರ್ಷಗಳ ಪರಿಶ್ರಮದ ಫಲ ಈ ಪ್ರೇಮಸ್ಮಾರಕ. ಈ ಕಟ್ಟಡದ ನಿರ್ಮಾಣಕ್ಕೆ ಪೂರ್ಣ ಅಮೃತಶಿಲೆಯನ್ನು ಬಳಸಲಾಗಿದ್ದು, ಅದನ್ನು ರಜಪೂತಾನದಲ್ಲಿನ ಮಕ್ರಾನ್ ಎಂಬಲ್ಲಿಂದ ತರಿಸಲಾಗಿದೆ.

ಇದರ ನಿರ್ಮಾಣಕ್ಕೆ 3 ಕೋಟಿ ರೂಪಾಯಿಗಳು ಖರ್ಚಾಗಿದೆ.ಆದ್ದರಿಂದ ಪರ್ಶಿಯನ್ ಭೌತಿಕ ಸೌಂದರ್ಯ ಮತ್ತು ಹಿಂದೂಗಳ ಆಧ್ಯಾತ್ಮಿಕ ಸೌಂದರ್ಯವನ್ನು ಸಮ್ಮಿಳಿಸಿಕೊಂಡ ಕಲಾತ್ಮಕ ಕಟ್ಟಡ ಎನ್ನಲಾಗಿದೆ. ಇದರ ಎತ್ತರ 187 ಅಡಿ ನಾಲ್ಕು ದಿಕ್ಕಿನಲ್ಲಿರುವ ನಾಲ್ಕು ಮಿನಾರ್‌ಗಳ ಎತ್ತರ 137 ಅಡಿ. ಕಟ್ಟಡದ ವಿಸ್ತೀರ್ಣ 313 ಚದರ ಅಡಿ ಮೇಲ್ಭಾಗದ ಗೋಳವು 80 ಅಡಿ ಎತ್ತರವಾಗಿದ್ದು 60 ಅಡಿ ವ್ಯಾಸವುಳ್ಳದ್ದಾಗಿದೆ ಪ್ರಮುಖ ಪ್ರವೇಶದ್ವಾರವು 90 ಅಡಿ ಎತ್ತರವುಳ್ಳದ್ದಾಗಿದೆ ಇದರ ಮೇಲ್ಭಾಗದಲ್ಲಿ ಅರೇಬಿಕ್ ಲಿಪಿಯಲ್ಲಿ ಕುರಾನಿನ ವಾಕ್ಯಗಳನ್ನು ಕೆತ್ತಲಾಗಿದೆ ಅದು ಭವ್ಯತೆ ಸುಂದರ ಕೊಮಲತೆಗಳಿಂದ ಪ್ರಸಿದ್ಧವಾಗಿದ್ದು ವಿಶ್ವದಲ್ಲೇ ಇದರ ರಚನೆ ಅಪೂರ್ವವಾಗಿದೆ,



ದ್ರಾಕ್ಷಾಯಿಣಿ ಕಾಗೇರ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಸ್ವಾತಂತ್ರ್ಯ**

ಸ್ವಾತಂತ್ರ್ಯ ಚಳುವಳಿ ನೀ ನಮಗೆ ಬಳುವಳಿ
ನಿನ್ನ ಪಡೆಯಲು ನಾಡಲ್ಲಿ ರಕ್ತದೂಕಳಿ
ಎಲ್ಲೆಲ್ಲೂ ಬರೀ ಬ್ರಿಟಿಷರ ಹಾವಳಿ

ನಾಡೆಲ್ಲ ತುಂಬಿತ್ತು ಮುತ್ತು ರತ್ನಗಳಿಂದ
ವ್ಯಾಪಾರ ಮಾಡಲು ಬಂದರು ದೂರದೂರಿಂದ
ವೈಭವದ ನಾಡನ್ನು ನೋಡಿದರು ಅಚ್ಚರಿಯಿಂದ
ಅವರ ನಿಲಿಮ ಕೂಡಿತ್ತು ಗಾಂಭೀರ್ಯದಿಂದ

ತುಂಬಿ ಹರಿದಿತ್ತು ಸಿರಿ ಸಂಸ್ಕೃತಿಯು
ಮೂಲೆ ಮೂಲೆಯಲ್ಲೂ ಅದರ ಪರದಿಯು
ನಾಡಿನ ತುಂಬೆಲ್ಲಾ ಅದರ ವರದಿಯು
ಅದರೆ ಅದಕ್ಕ ಬಂದಿತ್ತು ಕೊನೆ ಸರದಿಯು

ನಾ ಮುಂದು ತಾ ಮುಂದು
ಎಂದು ಬಂದರು ಪರಕೀಯರು
ಇವರ ಒತ್ತೆಯಾಲಾದರು ಭಾರತೀಯರು
ಅವರಂತೆ ನೆಡೆದರು ಕೇಲವು ಅರಸರು

ರವಿ ಮುಳುಗದ ನಾಡು
ಮೂಡಿತು ಭಾರತದಲಿ
ನಾವೆಲ್ಲರು ಮುಳುಗಿದೆವು
ಅವರ ಅಧೀನದಲ್ಲಿ
ಹೇಗೂ ಎನೋ ನೆಡೆಯಿತು
ಹುತಾತ್ಮರ ಪ್ರಯತ್ನದ ಅಂತ್ಯದಲಿ

ಅದು ನಮಗೆ ಗೋತ್ತಾಯಿತು
ಇದು ಸ್ವಾತಂತ್ರ್ಯ ಚಳುವಳಿ
ನಮ್ಮ ಭಾರತೀಯರು
ನಮಗೆ ಕೊಟ್ಟ ಸ್ವಾತಂತ್ರ್ಯ ಬಳುವಳಿ



ನಳಿನಾ ಬಿ ಹೆಚ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ವೈವಿಧ್ಯತೆಯಲ್ಲಿ ಏಕತೆ – ಭಾರತ ರಾಷ್ಟ್ರ

ವೈವಿಧ್ಯತೆಯಲ್ಲಿನ ಏಕತೆ ಒಂದು ಪ್ರಸಿದ್ಧ ಪರಿಕಲ್ಪನೆಯಾಗಿದ್ದು, ಈ ಪರಿಕಲ್ಪನೆಯನ್ನು ಭಾರತವು ಉತ್ತಮಗೊಳಿಸುತ್ತದೆ. ಭಾರತ ರಾಷ್ಟ್ರವು ವೈವಿಧ್ಯತೆಯ ಏಕತೆಯ ಸತ್ಯವನ್ನು ಸಾಬೀತು ಪಡಿಸುವ ರಾಷ್ಟ್ರವಾಗಿ ಹೊರಹೊಮ್ಮಿದೆ.

ವೈವಿಧ್ಯೆತೆಯ ಏಕತೆ ಎಂದರೆ ವಿವಿಧ ಭಿನ್ನತೆಗಳ ನಂತರವೂ ಏಕತೆಯ ಅಸ್ತಿತ್ವವಾಗಿರುವುದಾಗಿದೆ. ಭಾರತವು ವೈವಿದ್ಯತೆಯ ಏಕತೆಯನ್ನು ನೋಡಲು ಬಹಳ ಸ್ಪಷ್ಟವಾದ ದೇಶವಾಗಿದೆ. ಏಕೆಂದರೆ, ಅನೇಕ ಧರ್ಮಗಳು, ಜನಾಂಗ, ಸಂಸ್ಕೃತಿ ಮತ್ತು ಸಂಪ್ರದಾಯದ ಜನರು ಪರಸ್ಪರ ಭಾವನೆಗಳನ್ನು ಪ್ರಭಾವಿಸದೆ ಮತ್ತು ಅವರ ಧರ್ಮಕ್ಕೆ ನಂಬಿಕೆ ಇಡದೆ ಇರುವ ಕಾರಣದಿಂದಾಗಿ ಬದುಕುತ್ತಿದ್ದಾರೆ. ಸಾಂಸ್ಕೃತಿಕ, ಸಾಮಾಜಿಕ, ಭೌತಿಕ, ಭಾಷಾಶಾಸ್ತ್ರ, ಧಾರ್ಮಿಕ, ರಾಜಕೀಯ, ಸ್ವೆಧ್ಯಾಂತಿಕ, ಮಾನಸಿಕ ಇತ್ಯಾದಿಗಳ ನಡುವಿನ ಭಿನ್ನತೆಗಳ ನಡುವೆಯೂ ವೈವಿಧ್ಯತೆಯ ಏಕತೆಯ ಅಸ್ತಿತ್ವವನ್ನು ಕೇಂದ್ರಿಕರಿಸುತ್ತಾರೆ. ವೈವಿಧ್ಯತೆಗಳು ಹೆಚ್ಚು ಸಂಕೀರ್ಣ ಐಕ್ಯತೆಯನ್ನು ಉಂಟುಮಾಡುತ್ತದೆ. ಜನಾಂಗದವರು, ಧರ್ಮಗಳು, ಜಾತಿಗಳು, ಉಪ–ಜಾತಿಗಳು, ಸಮುದಾಯಗಳು, ಭಾಷೆಗಳು ಮತ್ತು ಉಪಭಾಷೆಗಳ ನಡುವೆಯೂ ಭಾರತದಲ್ಲಿ ಜನರು ಒಗ್ಗೂಡುತ್ತಾರೆ. ಭಾರತದಲ್ಲಿ ಜನರು ಆಧ್ಯಾತ್ಮಿಕರಾಗಿದ್ದಾರೆ. ಆದ್ದರಿಂದ ಅವರು ಎಲ್ಲ ಧರ್ಮಕ್ಕೂ ಗೌರವ ನೀಡುತ್ತಾರೆ.

ಭಾರತದಲ್ಲಿ ವಿವಿಧ ಧರ್ಮಗಳು, ಜಾತಿಗಳು, ಭಾಷೆ, ಸಂಸ್ಕೃತಿಗಳು, ಜೀವನಶೈಲಿ, ದೇವತೆಗಳ ನಂಬಿಕೆ ಪೂಜಾ ಆಚರಣೆಗಳು ವಿವಿಧ ಧರ್ಮದಲ್ಲಿ ವಿವಿಧ ರೀತಿಯಿದ್ದರೂ ಸಹ ಒಂದೇ ಛಾವಣಿಯಡಿಯಲ್ಲಿ ಒಟ್ಟಿಗೆ ವಾಸಿಸುವ ಜನರು ಮಾಡುತ್ತಿದ್ದರು. ಆದಕಾರಣ ಭಾರತವನ್ನು ಭೂಮಿಗೆ ಹೋಲಿಸಲಾಗುತ್ತದೆ.

ಭಾರತದಲ್ಲಿ ವಾಸಿಸುವ ಜನರು ಒಂದೇ ತಾಯಿಯ ಮಕ್ಕಳು, ನಾವು ಮಾತೃ ಭಾರತ ಎಂದು ಕರೆಯುತ್ತೇವೆ. ಧರ್ಮ ಕರ್ಮದ ಸಿದ್ಧಾಂತದಲ್ಲಿ ಪ್ರತಿಯೊಬ್ಬರೂ ನಂಬಿಕೆ ಇರುವಂತಹ ವಿಶ್ವದ ಒಂದು ವಿಶಾಲ ಮತ್ತು ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಭಾರತವಾಗಿದೆ. ಇಲ್ಲಿ ಜನರು ಪ್ರಕೃತಿಯಲ್ಲಿ ಭಯಪಡುತ್ತಾರೆ. ಆತ್ಮದ ಶುದ್ಧೀಕರಣ, ಮರುಜನ್ಮ, ಮೋಕ್ಷ, ಸ್ವರ್ಗದ ಐಷರಾಮಿ ಮತ್ತು ನರಕದ ಶಿಕ್ಷೆಗಳನ್ನು ನಂಬುತ್ತಾರೆ. ಇಲ್ಲಿ ಜನರು ತಮ್ಮ ಧಾರ್ಮಿಕ ಜನರನ್ನು ಹಾನಿಯಾಗದಂತೆ ತಮ್ಮ ಉತ್ಸವಗಳನ್ನು ಆಚರಿಸುತ್ತಾರೆ.

ವೈವಿಧ್ಯತೆಯಲ್ಲಿ ಏಕತೆ ಭಾರತದ ಶಕ್ತಿಯಾಗಿದ್ದು, ಇದು ಭಾರತವನ್ನು ಗುರುತಿಸುವ ಪ್ರಮುಖ ಲಕ್ಷಣವಾಗಿದೆ. ಭಾರತ ವೈವಿಧ್ಯೆತೆಯ ಏಕತೆಯ ಸತ್ಯವನ್ನು ಸಾಬೀತುಪಡಿಸುವ ರಾಷ್ಟ್ರ. ವಿವಿಧ ಧರ್ಮಗಳು ಮತ್ತು ಜಾತಿಗಳು ಜನರು ಅನೇಕ ವರ್ಷಗಳಿಂದ ಯಾವುದೇ ಸಮಸ್ಯೆ ಇಲ್ಲದೆ ಒಟ್ಟಿಗೆ ವಾಸಿಸುತ್ತಿದ್ದಾರೆ.

ಎತ್ತರದ ಪರ್ವತಗಳು, ಕಣಿವೆಗಳು, ಸಾಗರಗಳು, ಪ್ರಸಿದ್ಧ ನದಿಗಳು, ಹೊಳೆಗಳು, ಕಾಡುಗಳು, ಮರುಭೂಮಿಗಳು, ಪ್ರಾಚೀನ ಸಂಸ್ಕೃತಿ ಮತ್ತು ಸಂಪ್ರದಾಯಗಳು ಮತ್ತು ಬಹು ಮುಖ್ಯವಾಗಿ ವೈವಿಧ್ಯತೆಯ ಏಕತೆಗಳಿಂದ ಭಾರತನ್ನು ಅಲಂಕರಿಸಲಾಗಿದೆ. ಇಲ್ಲಿ ಜನರು ತಮ್ಮದೆ ಧರ್ಮ ಮತ್ತು ಭಾಷೆಗೆ ಸೇರಿದವರಾದರೂ ಅವರೆಲ್ಲರೂ ಮಾನವೀಯತೆಗೆ ಸಮಾನವಾದ ಲಕ್ಷಣವನ್ನು ಹೊಂದಿದ್ದಾರೆ. ಮತ್ತು ಅದು ಒಟ್ಟಿಗೆ ಬದುಕಲು ಸಾಧ್ಯವಾಯಿತು.

ವೈವಿಧ್ಯತೆಯ ಏಕತೆ ದೇಶಕ್ಕೆ ದೊಡ್ಡ ರಾಷ್ಟ್ರೀಯ ಏಕೀಕರಣದ ವಿಶಿಷ್ಟತೆಗೆ ಕಾರಣವಾಗಿದೆ. ಇದು ಸಾಕಷ್ಟು ಭ್ರಷ್ಟಾಚಾರ, ಉಗ್ರಗಾಮಿತ್ವ ಮತ್ತು ಭಯೋತ್ಪಾದನೆಯ ನಂತರವೂ ಪ್ರಬಲವಾದ ಮತ್ತು ಸಮೃದ್ದವಾದ ಭಾರತದ ಅಡಿಪಾಯವಾಗಿದೆ. ಭಾರತೀಯರು ರಾಷ್ಟ್ರ ರಕ್ಷಣೆ ಎಂಬ ವಿಷಯ ಬಂದರೆ ಅವರ ದೇಶಾಭಿಮಾನ ಮೆರೆಯುವಂತದ್ದು. ವಿವಿಧ ರಾಜ್ಯ, ವಿವಿಧ ಭಾಷೆ, ವಿವಿಧ ಸಂಸ್ಕೃತಿಯನ್ನು ಹೊಂದಿದ್ದರು ರಾಷ್ಟ್ರ ರಕ್ಷಣೆ ಎಂಬ ಮಾತು ಬಂದರೆ ಎಲ್ಲರೂ “ನಾವೆಲ್ಲಾ ಒಂದೇ ತಾಯಿಯ ಮಕ್ಕಳು” ಎಂಬಂತೆ ರಾಷ್ಟ್ರರಕ್ಷಣೆಗೆ ಮುಂದಾಗುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಭಾರತ ರಾಷ್ಟ್ರವನ್ನು ಭೂಮಿತಾಯಿಗೆ ಹೋಲಿಸಿದರೆ ತಪ್ಪಾಗಲಾರದು. “ವಿವಿಧತೆಯಲ್ಲಿ ಏಕತೆ”, “Unity in Diversity in India”.



ನಂದಾ. ಭ. ಗಾಮದ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಜಲಿಯನ್ ವಾಲಾಬಾಗ್ ದುರಂತ

ಆಧುನಿಕ ಭಾರತದ ಇತಿಹಾಸದಲ್ಲಿ ಅದರಲ್ಲೂ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಕ್ರೂರವಾದಂತಹ ದುರುಂತ ಎಂದರೆ 1919ರಲ್ಲಿ ನಡೆದಂತಹ ಜಲಿಯನ್ ವಾಲಾಬಾಗ್ ದುರುಂತವಾಗಿದೆ. ಬ್ರಿಟಿಷರ ದಬ್ಬಾಳಿಕೆ, ಕ್ರೂರನೀತಿ ಮುಂತಾದವುಗಳನ್ನು ಅರಿತುಕೊಳ್ಳಲು ಈ ಘಟನೆ ಒಂದು ಪ್ರಮುಖ ಉದಾಹರಣೆ ಎಂದು ಹೇಳಿದರೆ ತಪ್ಪಾಗಲಾರದು. ಬ್ರಿಟಿಷರ ವಿರುದ್ಧ ಅವರ ರಾಜಕೀಯ ನೀತಿಯನ್ನು ಹತ್ತಿಕ್ಕಲು ಭಾರತದಾದ್ಯಂತ ಚಳುವಳಿಗಳನ್ನು ನಡೆಸುತ್ತಿದ್ದರು. ಹಾಗೆಯೇ ಪಂಜಾಬಿನ ರಾಜಕೀಯ ಚಟುವಟಿಕೆಯನ್ನು ಹತ್ತಿಕ್ಕಲು ಧಮನೀಯವಾದ ಸಾಧನ/ ತಂತ್ರಗಳನ್ನು ಅನುಸರಿಸುತ್ತಿದ್ದರು.

ಪಂಜಾಬಿನ ಗವರ್ನರ್ ಸರ್ ಮೈಕೆಲ್ ಓ ಡೈಯರ್‌ನ ನೀತಿಯ ವಿರುದ್ಧ ತಂತ್ರಗಳನ್ನು ಅನುಸರಿಸುತ್ತಿದ್ದರು. ಹರತಾಳದ ಒಂದುವಾರದ ನಂತರ ಪಂಜಾಬ್ ನ ಅಮೃತಸರ ಜಿಲ್ಲೆಯ ಜಲಿಯನ್ ವಾಲಾಬಾಗ್ ಎಂಬಲ್ಲಿ ಜನರಿಗೆ ಸಭೆಯನ್ನು ಸೇರಲು ಕರೆ ನೀಡಿತ್ತು. ಇದರ ನಾಯಕತ್ವವನ್ನು ಡಾ.ಸತ್ಯಪಾಲ್ ಮತ್ತು ಡಾ. ಕಿಚ್ಲು ಎಂಬ ಜನಪ್ರಿಯ ನಾಯಕರುವಹಿಸಿದ್ದರು. ಏಪ್ರಿಲ್ 10 ರಂದು ಜನನಾಯಕರಾದ ಡಾ.ಕಿಚ್ಲು ಮತ್ತು ಡಾ.ಸತ್ಯಪಾಲ್‌ರನ್ನು ಸರ್ಕಾರವು ಪಂಜಾಬ್ ಪ್ರಾಂತ್ಯದಿಂದಾಚೆಗೆ ಗಡಿಪಾರುಮಾಡಿತು. ನಾಯಕರು ಬಂಧನದ ಸುದ್ದಿಯನ್ನು ತಿಳಿದು ಬಂಧನದಿಂದ ಬಿಡುಗಡೆ ಮಾಡುವಂತೆ ಕೇಳಲು ಡೆಪ್ಯೂಟಿ ಕಮಿಷನರ್ ಅವರ ನಿವಾಸದತ್ತ ಮೆರವಣಿಗೆ ಹೊರಟಿತು. ಆದರೆ, ಪೋಲಿಸರು ಈ ಮೆರವಣಿಗೆಯನ್ನು ಹಿಂದಕ್ಕಟ್ಟಿದರು. ಗುಂಡಿನ ದಾಳಿಯನ್ನು ಮಾಡಿದರು. ಇದರಿಂದ ಕೋಪಗೊಂಡ ಜನತೆ ಇಂಗ್ಲೀಷ್ ನೌಕರರ ವಿರುದ್ಧ ಮತ್ತು ಬ್ಯಾಂಕ್ ಮ್ಯಾನೇಜರ್ ವಿರುದ್ಧ ಶಾಲಾ ಮುಖ್ಯೋಪಾಧ್ಯಾಯರ ಮೇಲೆ ದಾಳಿ ಮಾಡಿ ಗಾಯಮಾಡಿದರು.

ಜಲಂಧರ್‌ನಲ್ಲಿದ್ದ ಡೈಯರ್‌ನನ್ನು ಸರ್ಕಾರವು ಅಮೃತಸರಕ್ಕೆ ಕರೆನೀಡಿ ಅಧಿಕಾರವನ್ನು ಸ್ವೀಕರಿಸಲು ತಿಳಿಸಿತು. ಡೈಯರ್ ಅಮೃತಸರಕ್ಕೆ ಬರುವ ಮುನ್ನ ತನ್ನ ಮಗನಿಗೆ ಈ ರೀತಿ ಹೇಳುತ್ತಾನೆ. "ಹಿಂದೂ ಮುಸ್ಲಿಮರು ಒಂದಾಗಿದ್ದಾರೆ. ಮುಂದೆ ಒಂದು ದೊಡ್ಡ ಘಟನೆ ನಡೆಯಲಿದೆ. ಆದ್ದರಿಂದ ನಿನ್ನ ತಾಯಿ ಮುತ್ತ ದಾಯಾದಿ ಅಲೈಸ್‌ರನ್ನು ಕಾಯುತ್ತಾ ನೀನು ವರಂಡಾದಲ್ಲಿ ಮಲಗು" ಎಂಬ ಎಚ್ಚರಿಕೆ ನೀಡುವ ಮೂಲಕ ಅಮೃತಸರಕ್ಕೆ ಬಂದು ಅಧಿಕಾರವನ್ನು ವಹಿಸಿಕೊಳ್ಳುತ್ತಾನೆ.

ಹೀಗೆ ಅಧಿಕಾರವನ್ನು ವಹಿಸಿಕೊಂಡ ಡೈಯರ್‌ನಿಗೆ ಸರ್ಕಾರವು ಜನರ ಮೇಲೆ ಸೇಡು ತೀರಿಸಿಕೊಳ್ಳಲು ಪೂರ್ತಿಯಾದ ಅಧಿಕಾರ ನೀಡುತ್ತಾರೆ. ರೊಚ್ಚಿಗೆದ್ದ ಸರ್ಕಾರವು ಅಮೃತಸರದಲ್ಲಿ ಎಲ್ಲ ರೀತಿಯ ಸಭೆ ಸಮಾರಂಭ, ಸಮಾವೇಶಗಳನ್ನು ಬಹಿಷ್ಕರಿಸುವುದಾಗಿ ಆಜ್ಞೆ ಹೊರಡಿಸಿತು. ಈ ಸಂದರ್ಭದಲ್ಲಿ ಕುಡಿತಗೊಂಡ

ಪಂಜಾಬಿನ ಸೈನಿಕರು ಪಥಸಂಚಲನ ಕೈಗೊಂಡಾಗ ನಗರದ ಜನರು "ಹಿಂದೂ ಮುಸಲ್ಮಾನ್ ಕಿ ಜೈ" ಎಂಬುದಾಗಿ ಕೂಗಿದ್ದು, ಬ್ರಿಟಿಷ್ ಸರ್ಕಾರವನ್ನು ಇನ್ನಷ್ಟು ಉದ್ರೇಕಗೊಳಿಸಿತು.

ಅಂದು ಏಪ್ರೀಲ್ 13 ವೈಶಾಖ ದಿನ ಇಡೀ ಜಲಿಯನ್ ವಾಲಾಬಾಗ್ ಸ್ಥಳವೇ ರಕ್ತದೋಕುಳಿಯಿಂದ ಕೂಡಿತ್ತು. ಸರ್ಕಾರದ ವಿರುದ್ಧ ಬೇಸತ್ತ ಪಂಜಾಬ್ ಜನರು ಸುಮಾರು 10 ರಂದ 20 ಸಾವರ ಜನರು ಜಲಿಯನ್ ವಾಲಾಬಾಗ್‌ನಲ್ಲಿ ಸಭೆ ಸೇರಿರುವವರೆಂದು ತಿಳಿದು ಡೈಯರ್ ದಾಳಿಗೆ ಹೊಚುಹಾಕಿದನು. ಡೈಯರ್ 25 ಜನ ಗನಾರ್ಬಾ, 25 ಜನ ಸಿಖ್, ರೈಫಲ್ ಹೊಂದಿದ ಸೈನಿಕರು ಮತ್ತು 40 ಜನ ಕೂಕ್ರಿ ಆಯುಧ ಹೊಂದಿದ ಗನಾರ್ಬಾ ಸೈನಿಕರನ್ನು ಸೇರಿಸಿಕೊಂಡು ಸುಮಾರು ಎರಡು ವಾಹನಗಳನ್ನು ತುಂಬಿಕೊಂಡು ಸಭೆ ಸೇರಿದ ಸ್ಥಳಕ್ಕೆ ಬಂದನು. ತನ್ನ ಅಪ್ಪಣೆಗೆ ಎದುರಾಗಿ ಸಭೆ ಸೇರಿದ್ದರಿಂದ ಜನರು ಚದುರಲು ಎಚ್ಚರ ನೀಡದೇ ಏಕಾಏಕಿ ಸುಮಾರು 100 ಅಡಿ ಅಂತರದಿಂದ 10 ನಿಮಿಷಗಳ ಕಾಲ ಸತತವಾಗಿ ಅಮಾನುಷವಾಗಿ ಗುಂಡು ಹಾರಿಸಲಾಯಿತು. ಗುಂಡು ಹಾರಲು ಆರಂಭವಾ ತಕ್ಷಣ ಜನರು ಚದುರಲು ಪ್ರಾರಂಭಿಸಿದರು. ಒಟ್ಟು 1650 ಗುಂಡುಗಳನ್ನು ಹಾರಿಸಲಾಯಿತು.

ಗುಂಡಿನಿಂದ ತಪ್ಪಿಸಿಕೊಳ್ಳಲು ಯಾಔಉದೇ ಮಾರ್ಗವಿರದೇ 5 ಅಡಿ ತಗ್ಗಾಗಿದ್ದ ಕಡೆಗೆ ಓಡಲು ಪ್ರಯತ್ನಿಸಿದರು. ಆದರೆ, ಡೈಯರ್‌ನ ಗುರಿ ಆ ಜನರ ಗುಂಪಿನ ಕಡೆಗೆ ಇತ್ತು. ಘಟನೆ ನಡೆದ ನಂತರ ವಿಚಾರಣಾ ಸಮಿತಿಯು ನೀಡಿದ ವರದಿಯಂತೆ ಸುಮಾರು 379 ಜನರು ಸತ್ತರು. 1137 ಜನರಿಗೆ ಗಾಯಗಳಾದವು. ಅಂದರೆ 1650 ಗುಂಡುಗಳಿಗೆ 1516 ಸಾವು ನೋವುಗಳು ಡೈಯರ್ ಮಾತಿನಲ್ಲೇ ಹೇಳಬೇಕೆಂದರೆ "ಗುರಿ" ಪಸಂದಾಗಿತ್ತು.

ಈ ಘಟನೆ ಇತಿಹಾಸದಲ್ಲಿ ಜಲಿಯನ್ ವಾಲಾಬಾಗ್ ದುರುಂತವೆಂದು ಪ್ರಸಿದ್ಧಿಯಾಗಿದೆ. ಈ ವಿಷಯದಿಂದ ಇಡೀ ಭಾರತದ ಜನರೇ ಸ್ವಾಭಾವಿಕವಾಗಿಯೇ ದಿಗ್ಮೂಢರಾದರು. ಮತ್ತು ದೇಶದಾದ್ಯಂತ ಅಶಾಂತಿಯ ಹೊಗೆಯಾಡಲಾರಂಭಿಸಿತು. ಈ ಜಲಿಯನ್ ವಾಲಾಬಾಗ್ ಘಟನೆಯ ಭಾರತೀಯ ಜನರಿಗೆ ಮುಂದೆ ಹೋರಾಡಲು ಪರಿಣಾಮ ಬೀರಿತು. ಈ ಘಟನೆಯಿಂದ ಭಗತ್‌ಸಿಂಗ್, ಚಂದ್ರಶೇಖರ ಆಬಾರ್‌ರಂತಹ ನಾಯಕರು ಪ್ರಭಾವವನ್ನು ಪಡೆದುಕೊಂಡರು. ಈ ಘಟನೆಯ ನಂತರ ಭೇಟಿಕೊಟ್ಟ ಮಹಾದೇವ ದೇಸಾಯಿಯವರು "ಅದೊಂದು ಕಗ್ಗೊಲೆ, ಒಂದು ಕೊಲೆಗಡುಕುತನ" ಎಂದು ಉಗ್ಗರಿಸಿದ್ದಾರೆ.



ನಂದಾ. ಭ .ಗಾಮದ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಗಾಂಧೀತಾತ**

ಕರಮಚಂದ ಗಾಂಧೀ ಪುತಲಿಬಾಯಿಯ
ಮುದ್ದಿನ ಮಗನಾಗಿ ಜನಿಸಿಹರು
ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ನಡೆಸಿ
ಬ್ರಿಟಿಷರ ಮನ ಒಲಿಸಿದರು.

ವರ್ಣಭೇದ ನೀತಿಯ
ಅಡಗಿಸಿ ಮಹಿತ್ತರು ಎನಿಸಿದರು
ಅಹಿಂಸಾ ಮಾರ್ಗದ ಸ್ವಾತಂತ್ರ್ಯ
ಪಡೆದು ಸ್ನೇಹವ ಬೆಳೆಸಿದರು.

ಚರಕವ ಹಿಡಿದು
ಬಡವರ ಉಡುಗೆ ತೊಟ್ಟಿಹರು
ಹಿಂಸೆಯ ಅಡಗಿಸಿ
ಮಾನವೀಯತೆ ಮೆರೆದಿಹರು

ಅವರೇ ನಮ್ಮ ತಾತ
ವಿಶ್ವಕ್ಕೆಲ್ಲ ಶಾಂತಿದಾತ
ಪರಮಪೂಜ್ಯ ಗಾಂಧೀ
ಶ್ರೀ ಮಹಾತ್ಮ ಗಾಂಧೀ.



ನಂದಾ.ಭ.ಗಾಮದ್
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಮೆರವಣಿಗೆ**

ನಾವು ಗಾಂಧಿ ಅಜ್ಜನ ನೋಡಿಲ್ಲ
ಅವ್ರು ಟೊಪ್ಪಿಗೆ ಹಾಕೊಂಡು
ಜನಾಸೇರಿಸಿ ದೇಶಕ್ಕೆ ಜೈಕಾರ ಹಾಕ್ಸಿ
ಫಿರಂಗಿಯವರಿಗೆ ಧಿಕ್ಕಾರ ಕೂಗಿಸೋರಂತ
ಅಸಹಕಾರದ ಮೂಲಕ ಅವರ
ಅಹಂಕಾರ ಮುರಿದು
ಶಾಂತಿ ಮೂಲಕ ಕ್ರಾಂತಿ ಮಾಡಿ
ಅಹಿಂಸೆ ಅನ್ನೋ ಝೇಂಡಾ ಹಾರ್ಸಿದ್ರಂತ
ಅದ್ನ ಊಹಿಸಿಕೊಂಡ್ರ ಮೈ ಜುಂ ಅಂತತಿ
ಹಿಂಗ.... ನಾವು ಹಿಂದಿಂದು ನೆನಪಿಸಿಕೊಳ್ತಾ
ಹಳಸಿದ ಭಾಷಣ ಕೇಳಿ ಚಪ್ಪಾಳೆ ಹೊಡಕೊಂತ
ಮೈಮರೆತಾಗ
ಮತ್ತೊಬ್ಬ ಅಜ್ಜ ಪ್ರತ್ಯಕ್ಷ ಅಗ್ಯಾನ
ಜನಲೋಕಪಾಲ ಬಿಲ್ ಅಂತಾ ಜನರ್ನ
ಬೀದಿಗೆ ಇಳಿಸಿ ಪ್ರಶ್ನೆ ಮಾಡಾಕತ್ತ್ಯಾನ
ದೇಶವೆಂಬೋ ದೇಶ ಅಜ್ಜನ ಬೆನ್ನಿಗೆ ನಿಂತಂತಿ
ಕಾಲ ಉರುಳ್ತತಿ......
ಜಂತರಮಂತರ್‌ನ್ಯಾಗ ಅಣ್ಣಾ ಹೀಂಗಾ
ಹೋರಾಟ ಮಾಡಿದ್ರು ಅಂತ ಇತಿಹಾಸ ಸೇರ್ತತಿ
ಮುಂದಿನ ಪೀಳಿಗೆನೂ ಇದ್ನ ತಿಳಿದು
ಮೈ ಜುಂ ಅನಿಸಿಕೊಳ್ತತಿ.
ಹಿಂಗ....ಭಾಷಣ ಕೇಳಿಕೊಂಡ ಮೈಮರೆತು
ಮುಂದುವರೆದ್ರ ದೇಶಕ್ಕೆ ಆಪತ್ತ ಐತಿ
ಹಿರಿಯರು ಹಚ್ಚಿದ ದೊಂದಿನ
ಯುವಕರು ಹಿಡಿದು ಮೆರವಣಿಗೆ ಹೋಗಬೇಕಾಗೈತಿ
ಅಣ್ಣ ಆಕ್ಕ ಎಲ್ಲರೂ ಜರೂರ್ ಬರ್ರಿ
ಈ ದೊಂದಿನ ದಳ್ಳುರಿ ಮಾಡಿ
ಭ್ರಷ್ಟರನ್ನ ಭಸ್ಮಮಾಡಿ.... ಬೂದಿಯೂ ಸಿಗಬಾರದು
ಹಂಗ ಮಾಡೋಣ ಬನ್ನಿ.



ಸುಮಲತಾ.ಎಸ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಮಹಿಳೆಯರ ಬಗ್ಗೆ ಸಾರ್ವನಿಕರಿಗೆ ಇರಬೇಕಾದ ಮಾಹಿತಿಗಳು:**

1. ವರದಕ್ಷಣೆ ನೀಡುವುದು ಹಾಗೂ ಪಡೆಯುವುದು ಅಪರಾಧ.
2. ಹೆಣ್ಣು ಮಗಳ ಮದುವೆಗೆ ಕನಿಷ್ಟ 18 ವರ್ಷ ವಯಸ್ಸಾಗಿರಬೇಕು.
3. ಮದುವೆಯ ಸಂದರ್ಭಗಳಲ್ಲಿ ತೆಗೆಯಲಾಗಿದ ಭಾವಚಿತ್ರಗಳನ್ನು (ನೆಗೆಟೀವ್‌ನೊಂದಿಗೆ), ಉಡುಗೊರೆಗಳು, ಸ್ತ್ರೀಧನ ಇತ್ಯಾದಿಗಳ ದಾಖಲಾತಿಗಳನ್ನು ಇಟ್ಟುಕೊಳ್ಳುವುದರಿಂದ ಮುಂದೆ ತೊಂದರೆ ಆದಾಗ ಅನುಕೂಲವಾಗುತ್ತದೆ.
4. ಮಹಿಳೆಯ ಮೇಲೆ ಬಲಾತ್ಕಾರ ಆದಾಗ ಅವಳಿಗೆ ಪ್ರಥಮ ಚಿಕಿತ್ಸೆಯನ್ನು ಸರ್ಕಾರಿ ವೈದ್ಯರಿಂದ ಕೊಡಿಸಿ, ಅವಳ ಬಟ್ಟೆಯನ್ನು ಸಾಕ್ಷಿಗೆ ಜೋಪಾನವಾಗಿ ಇಡುವುದು.
5. ಮಹಿಳೆಯ ಮೇಲೆ ದೌರ್ಜನ್ಯವಾದಾಗ ಸರ್ಕಾರಿ ವೈದ್ಯರಿಂದ ವೈದ್ಯಕೀಯ ದೃಢೀಕರಣ ಪಡೆಯಲು ಮರೆಯಬೇಡಿ.
6. ಮಹಿಳೆಯರ ಅಸ್ವಾಭಾವಿಕ ಸಾವು ಆದಾಗ ಸರ್ಕಾರಿ ವೈದ್ಯರಿಂದ ಶವ ಪರೀಕ್ಷೆ ಮಾಡಿಸುವುದು.
7. ಕುಟುಂಬದಲ್ಲಿ ಸಾವು, ಅಪಘಾತ, ಜಗಳ ಆಗಿರುವಾಗ, ಮಹಿಳೆಯು ಮಾನಸಿಕ ಅಸ್ಥಿರತೆಯಲ್ಲಿ ಇರುವಾಗ ಮಹಿಳೆಯರ ಸಂಬಂಧದವರು ನೀಡುವ ಯಾವುದೇ ಕಾಗದದ ಮೇಲೆ ರುಜು ಮಾಡಬೇಡಿ. ಇದರ ದುರುಪಯೋಗ, ಮೋಸ ಆಗಬಹುದು.
8. 1989ರ ನಂತರ ಮದುವೆ ಆದ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಾಪಾಲಿನ ಹಕ್ಕಿದೆ.
9. ಸ್ಥಿರ ಆಸ್ತಿಗಳನ್ನು ಗಂಡ ಮತ್ತು ಹೆಂಡತಿ ಇಬ್ಬರ ಹೆಸರಿನಲ್ಲಿ ನೊಂದಾಯಿಸಬೇಕು.
10. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಉದ್ಯೋಗಸ್ಥ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟಲು ಮಹಿಳೆಯರು ಕಾರ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ದೂರು ನಿವಾರಣಾ ಸಮಿತಿ ರಚಿಸಬೇಕು.
11. ತಾಲ್ಲೂಕು ಕೇಂದ್ರಗಳ ಸಿಡಿಪಿ ಕಛೇರಿಗಳಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ಅನ್ಯಾಯಗಳ ಬಗ್ಗೆ ಸಲಹೆ ಸಹಾಯ ನೀಡಲು ಸಾಂತ್ವನ ಕೇಂದ್ರಗಳಿವೆ.



ಸಂಗ್ರಹ
ದಿವ್ಯಜ್ಯೋತಿ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಭ್ರಷ್ಟಾಚಾರ – ಒಂದು ಸಾಮಾಜಿಕ ಪಿಡುಗು

ಇದರ ಕೆಲ ಅಂಶಗಳು:

1. ಭ್ರಷ್ಟಾಚಾರದ ಜಾಲ
2. ಲಂಚದ ಹಾವಳಿ
3. ನೈತಿಕ ಮೌಲ್ಯ
4. ರಾಜಕಾರಣಿಗಳ ಪಾತ್ರ
5. ಉಪಸಂಹಾರ

ಭ್ರಷ್ಟಾಚಾರ ಇಂದು ಸರ್ವವ್ಯಾಪಿಯಾಗಿದೆ. ಇದರ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಶಕ್ತಿ ನನ್ನಲ್ಲಿದೆ ಎಂದು ಭಾರತದ ಯಾವುದೇ ವ್ಯಕ್ತಿ ಹೇಳಲಾಗದಷ್ಟು ಇವರ ಇವರ ಕಂಬಧಬಾಹು ಎಲ್ಲೆಡೆ ಚಾಚಿದೆ. "ಸರ್ಕಾರ ನೀಡುವ ಒಂದು ರೂಪಾಯಿಯಲ್ಲಿ ಹದಿನೈದು ಪೈಸೆಯಷ್ಟು ಮಾತ್ರ ಸರಿಯಾದ ಜಾಗಕ್ಕೆ ಸರಿಯಾದ ವ್ಯಕ್ತಿಗೆ ತಲುಪುತ್ತದೆ. ಉಳಿದ ಎಂಬತ್ತೈದು ಪೈಸೆಯಷ್ಟು ಮಧ್ಯವರ್ತಿಗಳ ಪಾಲಾಗುತ್ತದೆ" ಎಂದು ಆಗಿನ ಪ್ರಧಾನಮಂತ್ರಿ ರಾಜೀವಗಾಂಧಿ ಹೇಳಿದ ಮಾತುಗಳಿಂದ ನಾವು ಭ್ರಷ್ಟಾಚಾರದ ಜಾಲವನ್ನು ಕಲ್ಪಿಸಿಕೊಳ್ಳಬಹುದು.

**ಭಾರತದಲ್ಲಿ ಭ್ರಷ್ಟಾಚಾರ ಇಂದು ಮುಗಿಲುಮುಟ್ಟಿದೆ** :

ಅನ್ಯಾಯ, ಅತ್ಯಾಚಾರ ಬಲಾತ್ಕಾರ, ಕಪ್ಪುದಂಧೆ, ಲಂಚ, ಅಪಹರಣ ಮೋಸ, ವಂಚನೆ ಇತ್ಯಾದಿ ಎಲ್ಲವೂ ಭ್ರಷ್ಟಾಚಾರದ ಇನ್ನೊಂದು ರೂಪವಾಗಿದೆ. ರಾಜಕೀಯ ಪಕ್ಷಗಳು, ಅಧಿಕಾರಿ ಮತ್ತು ನೌಕರವರ್ಗ, ಜಾತಿ, ವರ್ಗಬೇಧವಿಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ.

ಭ್ರಷ್ಟಚಾರದ ಸೋಂಕಿಲ್ಲದೆ ಇಂದು ಯಾವುದೇ ಕೆಲಸ ಗೌರವಾನ್ವಿತ ವ್ಯಕ್ತಿಯಾಗಿದ್ದಾನೆ. ಇದಕ್ಕೆ ಕೊನೆ–ಮೊದಲೆ ಇಲ್ಲವಾಗಿದೆ. "ಮೋಡವೇ ಹರಿದು ಹೋದರೆ ಹೊಲಿಗೆ ಹಾಕುವುದು ಎಲ್ಲಿ"?

ಇಂದು ನೈತಿಕ ಮೌಲ್ಯ ಭ್ರಷ್ಟಾಚಾರಿಗಳ ಕೈಯಲ್ಲಿ ಸಿಲುಕಿದೆ ಪ್ರಭಾವಶಾಲಿ ವ್ಯಕ್ತಿ ಮತ್ತು ಧನಿಕ ವ್ಯಕ್ತಿ ನ್ಯಾಯವನ್ನು ಖರೀದಿಸುವಷ್ಟರ ಮಟ್ಟಿಗೆ ಇಂದು ಭ್ರಷ್ಟಾಚಾರ ಹರಡಿದೆ.

ಆಡಳಿತ ದುರುಪಯೋಗ ಭ್ರಷ್ಟಾಚಾರದ ಮತ್ತೊಂದು ಮಗ್ಗುಲು. ವಿದ್ವಾಂಸ, ಸ್ಜ್ಜನ, ಯೋಗ ವ್ಯಕ್ತಿ ಲಂಚ ನೀಡುವುದರ ಮೂಲಕ ತನ್ನ ಗೌರವವನ್ನು ಪ್ರದರ್ಶಿಸುವಂಥ ಪರಿಸ್ಥಿತಿ ಇಂದು ಒದಗಿದೆ.

ಕೋಟಾ, ಪರ್ಮಿಟ್, ರೇಷನ್, ಫಂಡ್, ಲೈಸೆನ್ಸ್, ಓಟು, ವರ್ಗಾವಣೆ, ಉದ್ಯೋಗ ಇತ್ಯಾದಿ ಭ್ರಷ್ಟಾಚಾರದ ಬಾಗಿಲುಗಳಾಗಿವೆ. ಪಾಕಿಸ್ತಾನದೊಡನೆ ಯುದ್ಧ ಆರಂಭವಾದಾಗ ದೇಶದ ರಹಸ್ಯವನ್ನು ಮಾರಾಟಮಾಡಿ ಸತ್ರುಗಳೊಡನೆ ಕೈಕುಲುಕಿದ ಭ್ರಷ್ಟಾಚಾರಿಗಳ ಸುದ್ಧಿ ನಿಜಕ್ಕೂ ಆಘಾತಕಾರಿಯಾದದ್ದು.

ಭ್ರಷ್ಟಾಚಾರಕ್ಕೆ ಕುಮ್ಮಕ್ಕು ದೊರೆಯುತ್ತಿರುವ ರಾಜಕೀಯ ಮುಖಂಡರಿಂದ, ಅಧಿಕಾರಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಹಣಗಳಿಸುವ ದಂಧೆ ಮಾಡುತ್ತಾ ಸಮಾಜದಲ್ಲಿ ರಾಜಕೀಯ ನೇತಾರ ಎಲ್ಲರ ಗೌರವಕ್ಕೆ ಪಾತ್ರನಾಗುತ್ತಾನೆ. ಚುನಾವಣೆ ಸಮಯದಲ್ಲಿ ಕೈಗಾರಿಕೋದ್ಯಮಿಗಳಿಂದ, ಬಂಡವಾಳ ಶಾಹಿಗಳಿಂದ ಚಂದಾಹಣ ಹೆಸರಿನಲ್ಲಿ ಹಣ ಕೀಳುವುದು ಇಂದು ಸರ್ವೇಸಾಮಾನ್ಯ ಸಂಗತಿಯಾಗಿದೆ. ಅಶಿಕ್ಷಿತ ಮತದಾರ ರಾಜಕೀಯ ಪುಡಾರಿಗಳು ತೋರಿಸುವ ಹಣ, ಮದ್ಯ ಇತ್ಯಾದಿ ಆಮಿಷಕ್ಕೆ ಬಲಿಯಾಗಿ ತನ್ನ ಹಕ್ಕನ್ನು ಮಾರಿಕೊಳ್ಳುತ್ತಿದ್ದಾನೆ.

"ಎಲ್ಲರೂ ಭ್ರಷ್ಟಾಚಾರರಾಗಿದ್ದಾರೆ ನೀನಿನ್ನೂ ಏಕೆ ಭ್ರಷ್ಟನಾಗಿಲ್ಲ" ಎಂದೂ ನೆಹರೂರವರು ಒಮ್ಮೆ ಸಿಟ್ಟಿನಿಂದ ಕೇಳಿದುಂಟು. ಕಾಲ್‌ಗರ್ಲ್ ವ್ಯವಹಾರವೂ ಭ್ರಷ್ಟಾಚಾರದ ಒಂದು ಅಂಗವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಪ್ರಶ್ನೆ-ಪತ್ರಿಕೆ ಬಹಿರಂಗಗೊಳ್ಳುವುದು ಅಂಕಗಳು ಅದಲು ಬದಲಾಗುವುದು, ಕುಲಪತಿ ಹುದ್ದೆಗಳೂ ಮಾರಾಟವಾಗುವುದು ಭ್ರಷ್ಟಾಚಾರದ ಜಾಲವನ್ನು ಪರಿಚಯಿಸುತ್ತದೆ.



ಗಾಯಿತ್ರಿ ಡಿ.ಎಸ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## 1987ರಲ್ಲಿ25ನೇ ರಾಜ್ಯವಾಗಿ ಗೋವಾ

ಮೇ 30, 1987ರಂದು ಗೋವಾ 25ನೇ ರಾಜ್ಯವಾಗಿ ಒಕ್ಕುಟಕ್ಕೆ ಸೇರ್ಪಡೆಯಾಯಿತು. 1987 ಸೆಪ್ಟಂಬರ್ ನಲ್ಲಿ ಭಾರತ ಸರ್ಕಾರ ಜಲಸಂಪನ್ಮೂಲ ಸಚಿವಾಲಯವು ರಾಷ್ಟ್ರೀಯ ಜಲನೀತಿಯನ್ನು ಜಾರಿಗೆ ತಂದಿತು.ಮತ್ತೆ 2002ರಲ್ಲಿ ರಾಷ್ಟ್ರೀಯ ಜಲನೀತಿಯನ್ನು ಪರಿಷ್ಕರಸಲಾಯಿತು. ಗಡಿನಾಡ ಗಾಂಧಿ ಖಾನ್ ಅಬ್ದುಲ್ರ ಗಫರ್ ಖಾನ್ರವರಿಗೆ 1987ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಭಾರತದ ನಾಗರೀಕತ್ವ ಹೊಂದಿಲ್ಲದ ವ್ಯಕ್ತಿಯು ಭಾರತ ರತ್ನ ಪಡೆದ ಮೊದಲಿಗರು. ಇಂಟಿಗ್ರೇಟೆಡ್ ರೂರಲ್ ಟೆಕ್ನಾಲಜಿಯನ್ನು ಕೇರಳದ ಪಾಲ್ಕಾಡ್ನಲ್ಲಿ 1987ರಲ್ಲಿ ಸ್ಥಾಪಿಸಲಾಯಿತು. "ಅಪರೇಷನ್ ಪವನ್"ಅಕ್ಟೋಬರ್ 11ರಿಂದ ಅಕ್ಟೋಬರ್25, 1987ರ ವರೆಗಿನ ಶ್ರೀಲಂಕಾದ ಜಾಪ್ನಾದಲ್ಲಿ ಎಲ್.ಟಿ.ಟಿ.ಇ ವಿರುದ್ಧ ಭಾರತೀಯ ಶಾಂತಿ ಪಾಲನ ಪಡೆಯು "ಅಪರೇಷನ್ ಪವನ್"ಎಂಬ ಮಿಲಟರಿ ಕಾರ್ಯಚರಣೆ ಕೈಗೊಂಡಿತು.

ಟಡಾನ್ನು 1987ರಲ್ಲಿ ಜಾರಿಗೆ ತರಲಾಯಿತು. 1987ರಲ್ಲಿ ವಿಶ್ವ ಟೆಬಲ್ ಟೆನ್ನಿಸ್ ಚಾಂಪಿಯನ್ ಶಿಪ್ ನವದೆಹಲಿಯಲ್ಲಿ ಜರಗಿತು.1987 ಜುಲೈ 25ರಂದು 8ನೇ ರಾಷ್ಟ್ರಪತಿಯಾಗಿ ಆರ್.ವೆಂಕಟ ರಾಮನ್ ರವರು ಅಧಿಕಾರವನ್ನು ವಹಿಸಿಕೊಂಡರು . 1987 ಸೆಪ್ಟಂಬರ್ 3 ರಂದು ಶಂಕರ್ ದಯಾಳ್ ಶರ್ಮಾರವರು 8ನೇ ಉಪ ರಾಷ್ಟ್ರಪತಿಯಾಗಿ ಅಧಿಕಾರವನ್ನು ವಹಿಸಿಕೊಂಡರು. "ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪ್ರೇಶ್‌ವಾಟ್" ಅಕ್ವಕಲ್ಚರ್‌ನ್ನು 1987ರಲ್ಲಿ ನವದೆಹಲಿಯಲ್ಲಿ ಸ್ಥಾಪಿಸಲಾಯಿತು. ಫ್ರೆಂಚರ ಕೈವಶವಾಗಿದ್ದ ಗೋವಾವು ಸ್ವಾತಂತ್ರ್ಯ ಬಂದ ನಂತರ 1987 ಮೇ 30 ರಂದು 25ನೇ ರಾಜ್ಯವಾಗಿ ಉದಯಗೊಂಡಿತು.



ಶಿಲ್ಪಾ ಪಿ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## 1986–ರಾಷ್ಟ್ರೀಯ ನೀತಿಗಳು

1986 ನವೆಂಬರ್ 16ರಿಂದ17ರ ವರೆಗೆ ಬೆಂಗಳೂರಿನಲ್ಲಿ ಅಂದಿನ ಪ್ರಧಾನಿ ರಾಜೀವಗಾಂಧಿ ಅಧ್ಯಕ್ಷತೆಯಲ್ಲಿ 2ನೇ ಸಾರ್ಕಸಮ್ಮೇಳನವು ಜರಗಿತು. ಜೂಲೈ 6–1986ರಲ್ಲಿ ಭಾರತದ 4ನೇ ಉಪ ಪ್ರಧಾನಿಯವರು ಬಾಬು ಜಗಜೀವನ್‌ರಾಮ್‌ರವರು ನಿಧಾನರಾದರು. ಇವರ ಸಮಾದಿಯ ಸ್ಥಳವನ್ನು ಸಮತಸ್ಥಳ ಎನ್ನುವರು.

ಗ್ರಾಹಕರ ರಕ್ಷಣ ಕಾಯ್ದೆ 1986ನ್ನು ಡಿಸೆಂಬರ್–24–1986 ರಲ್ಲಿ ಜಾರಿಗೆ ತರಲಾಯಿತು. ಮುಸ್ಲಿಮ್ ಮಹಿಳೆಯರ ಕಾಯ್ದೆ–1986 ರಲ್ಲಿ ಜಾರಿಗೆ ತರಲಾಯಿತು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೇ–1986 ರಲ್ಲಿ ರಾಜೀವ್ ಗಾಂಧಿ ನೇತೃತ್ವದ ಸಕಾರ ಜಾರಿಗೆ ತಂದಿತು.

ಮಿಜೊ ಒಪ್ಪಂದವು ಮಿಜೊ ನ್ಯಾಷನಲ್ ಫ್ರಂಟ್ ಮತ್ತು ಭಾರತ ಸರ್ಕಾರದ ನಡುವೆ ಜೂನ್–30–1986 ರಲ್ಲಿ ಆಯಿತು. ಅಪರೇಷನ್ ಬ್ಲಾಕ್ ಥಂಡರ್ ಎಂಬ ಕಾರ್ಯಚರಣೆಯನ್ನು 1986 ರಲ್ಲಿ ಅಮೃತ್‌ಸರ್‌ದ ಸ್ವರ್ಣಮಂದಿರದಲ್ಲಿ ಕೈಗೊಳ್ಳಲಾಯಿತು

ಟಾಟಾ ಕಮ್ಯುನಿಕೇಷನ್ ಲಿಮಿಟೆಡ್‌ನ್ನು 1986 ರಲ್ಲಿ ಸ್ಥಾಪಿಸಲಾಯಿತು. ಅಪರೇಷನ್ ಬ್ರಾಸ್ ಟಾಕ್ಸನ್ನು ಭಾರತದ ಸೇನಾ ಪಡೆಯು 1986 ರಲ್ಲಿ ರಾಜಸ್ಥಾನ್‌ದಲ್ಲಿ ಕೈಗೊಳ್ಳಲಾಯಿತು. ಸ್ತ್ರೀ ಯರನ್ನು ಯಾವುದೆ ಪ್ರಕಟಣೆಗಳನ್ನು ಅಸಭ್ಯವಾಗಿ ಪ್ರದರ್ಶಿಸುವುದನ್ನು ತಪ್ಪಿಸಲು 1986 ರಲ್ಲಿ ಮಹಿಳಾ ಕಾಯ್ದೆಯನ್ನು ಜಾರಿಗೆ ತರಲಾಯಿತು.



ರಂಜಿತಾ ಡಿ.ಎ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ರಾಷ್ಟ್ರೀಯ ಚಿಹ್ನೆಗಳು**

ಮೂರು ಕಡಲಿನ ನಟ್ಟ ನಟ್ಟನಡುವಿನ

ಸುಂದರ ಪರ್ಯಾಯ ದ್ವೀಪ

ಭರತನಾಳಿದ ಪ್ರದೇಶದ ಕೇಸರಿ, ಬಿಳಿ, ಹಸಿರು ವರ್ಣ

ನಡುವೆ ಅಶೋಕ ಚಕ್ರ

ತ್ಯಾಗ, ಶಾಂತಿ ಸಮೃದ್ದಿಯ ಸಂಕೇತವು ನಮ್ಮ ರಾಷ್ಟ್ರಧ್ವಜ

ಠಾಗೂರರು ರಚಿಸಿದ

ಭಾರತ ಭಾಗ್ಯ ವಿಧಾತ

ಹಾಡಿ ಹೊಗಳಿದ ಗೀತೆ ಜನ ಗಣ ಮನ ನಮ್ಮ ರಾಷ್ಟ್ರ ಗೀತೆ

ಸಾರನಾಥ ಸ್ತೂಪಸ್ತಂಭದ

ನಾಲ್ಕು ಸಿಂಹಗಳ ವದನ

ಸತ್ಯ ಮೇವ ಜಯತೇ ನಮ್ಮ ರಾಷ್ಟ್ರದ ಲಾಂಛನ

ಹಳದಿ ಪಟ್ಟಿ ಹೊಂದಿದ

ಅಯ್ಯಪ್ಪ ಸ್ವಾಮಿಯ ವಾಹನ

ಆ ಹುಲಿರಾಯನೇ ನಮ್ಮ ರಾಷ್ಟ್ರೀಯ ಪ್ರಾಣಿ

ಪೌರಾಣಿಕ ಹಿನ್ನೆಲೆ ಹೊಂದಿದ

ವಿಷ್ಣುವಿನ ನಾಭಿಯಲ್ಲಿ ಅರಳಿದ

ಕೆಸರಲ್ಲರಳುವ ಕಮಲ ನಮ್ಮ ರಾಷ್ಟ್ರೀಯ ಪುಷ್ಪ

ಬುದ್ಧನು ಸಿದ್ಧಿಯ ಪಡೆದ

ಬೋಧಿ ವೃಕ್ಷವದು

ನಮ್ಮ ರಾಷ್ಟ್ರೀಯ ವೃಕ್ಷ.



ರುಖಿಯಾ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಬಾಲ್ಯದಲ್ಲಿ ಬರಬೇಕಾದ ಶಿಸ್ತು



ಸಾವತ್ಥಿಯಲ್ಲಿ ಒಬ್ಬ ತರುಣ ಯಾವುದೋ ಕಾರಣಕ್ಕೆ ಉತ್ಸಾಹದಿಂದ ಪಬ್ಬಜಿತನಾದ. ಆದರೆ ಅವನಿಗೆ ಸಂಯಮವಿರಲಿಲ್ಲ, ಕರ್ತವ್ಯದ ಜವಾಬ್ದಾರಿಯಿಲ್ಲ. ಯಾವ ಸಮಯದಲ್ಲಿ ಧ್ಯಾನ ಮಾಡಬೇಕು, ಯಾವ ಕಾಲದಲ್ಲಿ ಪಾಠ ಕಲಿಯಬೇಕು ಎಂಬುದು ತಿಳಿಯದೇ ಒಂದೇ ಸಮನೆ ವಟಗುಟ್ಟುತ್ತ ಆಶ್ರಮದ ಶಾಂತಿಯನ್ನು ಕದಡುತ್ತಿದ್ದ. ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಏನೇನೋ ಗಲಾಟೆ ಮಾಡುತ್ತ ಎಲ್ಲ ಭಿಕ್ಷುಗಳ ಬೇಜಾರಿಗೆ ಕಾರಣನಾಗಿದ್ದ. ಅವರೆಲ್ಲ ಸೇರಿ ಬುದ್ಧನ ಹತ್ತಿರ ಬಂದು ದೂರು ನೀಡಿದಾಗ ಆತ ಅವರಿಗೊಂದು ಕಥೆ ಹೇಳಿದ.

ಹಿಂದೆ ವಾರಣಾಸಿಯಲ್ಲಿ ಬ್ರಹ್ಮದತ್ತ ರಾಜ್ಯಭಾರ ಮಾಡುತ್ತಿದ್ದಾಗ ಬೋಧಿಸತ್ವ ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ದೊಡ್ಡವನಾದ ಮೇಲೆ ಸರ್ವವಿದ್ಯಾ ಪಾರಂಗತನಾಗಿದ್ದ. ಐದು ನೂರು ಶಿಷ್ಯರ ಆಶ್ರಮದಲ್ಲಿ ಗುರುವಾಗಿ ತುಂಬಾ ಮರ್ಯಾದೆಯನ್ನು ಪಡೆದಿದ್ದ. ಆ ಆಶ್ರಮದಲ್ಲಿ ಒಂದು ಹುಂಜವಿತ್ತು. ಅದು ಸರಿಯಾಗಿ ಬೆಳಗಾಗುವ ಹೊತ್ತಿಗೆ ಕೂಗುತ್ತಿತ್ತು. ಅದರ ಕೂಗನ್ನು ಕೇಳಿದೊಡನೆ ಶಿಷ್ಯರು ಎದ್ದು ಪ್ರಾತಃವಿಧಿಗಳನ್ನು ಮುಗಿಸಿ ಧ್ಯಾನ ಮಾಡಿ ವಿದ್ಯೆ ಕಲಿಯಲು ಕೂರುತ್ತಿದ್ದರು. ಒಂದು ರೀತಿಯಲ್ಲಿ ಹುಂಜವೇ ಗಡಿಯಾರದಂತೆ ಕೆಲಸಮಾಡುತ್ತಿತ್ತು. ಹೀಗಿರುವಾಗ ಒಂದು ದಿನ ಹುಂಜ ಸತ್ತು ಹೋಯಿತು. ಈಗ ಶಿಷ್ಯರಿಗೆ ಯಾವಾಗ ಏಳುವುದು ಎಂಬುದು ತಿಳಿಯದಾಯಿತು. ಕೆಲವರು ಮಧ್ಯರಾತ್ರಿಯೇ ಎದ್ದುಬಿಡುತ್ತಿದ್ದರು ಮತ್ತೆ ಕೆಲವರು ಬೆಳಗಾಗಿ ಸೂರ್ಯ ತಲೆಯ ಮೇಲೆ ಬಂದರೂ ಮಲಗಿಯೇ ಇರುತ್ತಿದ್ದರು.

ಆಗ ಶಿಷ್ಯರು ಹುಡುಕಾಡಿ ಮತ್ತೊಂದು ಹುಂಜವನ್ನು ತಂದು ಪಂಜರದಲ್ಲಿಟ್ಟು ಸಾಕಿದರು. ಈ ಹುಂಜದ ಕಥೆಯೇ ಬೇರೆ. ಅದು ಹುಟ್ಟಿದ್ದೇ ಸ್ಮಶಾನದಲ್ಲಿ ಬೆಳೆದದ್ದೂ ಅಲ್ಲೇ. ಅಲ್ಲಿ ಯಾವಾಗ ಅಂತ್ಯಕ್ರಿಯೆಗೆ ಹೆಣ ಬಂದರೆ ಆಗ ಜೋರಾಗಿ ಕೂಗುತ್ತಿತ್ತು. ಆದ್ದರಿಂದ ಅದು ಆಶ್ರಮಕ್ಕೆ ಬಂದರೂ ಯಾವಾಗ ಕೂಗಬೇಕೆಂಬುದು ತಿಳಿಯಲಿಲ್ಲ. ಅದೊಮ್ಮೆ ಮಧ್ಯರಾತ್ರಿಯೇ ಕೂಗಿಬಿಡುತ್ತಿತ್ತು. ಮತ್ತೊಮ್ಮೆ ಮಧ್ಯಾಹ್ನ ಹನ್ನೆರಡಕ್ಕೆ ಕೂಗುತ್ತಿತ್ತು. ಅದು ನಡುರಾತ್ರಿಯಲ್ಲಿ ಕೂಗಿದಾಗ ವಿದ್ಯಾರ್ಥಿಗಳು ಎದ್ದು ತಮ್ಮ ಪಾಠಕ್ಕೆ ತೊಡಗುತ್ತಿದ್ದರು. ಬೆಳಗಾಗುವ ಹೊತ್ತಿಗೆ ನಿದ್ರೆ ಅವರನ್ನು ಎಳೆಯುತ್ತಿತ್ತು. ಅವರು ಆಗ ಮಲಗಿಕೊಂಡು ಮಧ್ಯಾಹ್ನ ಏಳುತ್ತಿದ್ದರು. ಒಂದು ವಾರದಲ್ಲಿ

ಯಾರಿಗೂ ನಿದ್ರೆ ಸರಿಯಾಗಲಿಲ್ಲ, ಪಾಠ ಪ್ರವಚನಗಳು ಸರಿಯಾಗಿ ನಡೆಯಲಿಲ್ಲ. ಗುರುಗಳಿಗೂ ಬಹಳ ಚಿಂತೆಯಾಯಿತು. ಒಂದು ದಿನ ಶಿಷ್ಯರ ಕೋಪ ಮಿತಿಮೀರಿ ಆ ಹುಂಜವನ್ನು ಹಿಡಿದು ಅದರ ಕತ್ತನ್ನು ತಿರುಚಿ ಕೊಂದು ಹಾಕಿಬಿಟ್ಟರು. ತಾವು ಮಾಡಿದ ಕಾರ್ಯವನ್ನು ಗುರುಗಳಿಗೆ ಹೇಳಿ ಕ್ಷಮೆ ಕೋರಿದರು.

ಬುದ್ಧ ಈ ಮೇಲಿನ ಕಥೆಯನ್ನು ತಿಳಿಸಿ ಹೇಳಿದ , 'ಯಾರು ಬಾಲ್ಯದಲ್ಲೇ ತಂದೆ–ತಾಯಿಯರಿಂದ ಸರಿಯಾದ ಶಿಕ್ಷಣ ಹಾಗೂ ಶಿಸ್ತನ್ನು ಪಡೆಯುವುದಿಲ್ಲವೋ ಅವರು ಅಶಿಕ್ಷಿತರಾಗಿಯೇ ಉಳಿಯುತ್ತಾರೆ. ಅವರೂ ವೃದ್ಧಿಯಾಗುವುದಿಲ್ಲ ಮತ್ತು ತಾವಿರುವ ವ್ಯವಸ್ಥೆಯನ್ನು ಕೆಡಿಸಿಬಿಡುತ್ತಾರೆ.–ಈ ನಮ್ಮ ಗದ್ದಲದ ಭಿಕ್ಷುವಿನ ಹಾಗೆ ಮತ್ತು ಸ್ಮಶಾನದ ಹುಂಜದ ಹಾಗೆ. ಅವರು ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳದಿದ್ದರೆ ಬಹುದೊಡ್ಡ ಶಿಕ್ಷೆಯನ್ನು ಸಮಾಜ ಅವನಿಗೆ ನೀಡುತ್ತದೆ.'



ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಏಳಿರಿ ಏಳಿರಿ ಎದ್ದೇಳಿರಿ**

ಏಳಿರಿ ಏಳಿರಿ ಎದ್ದೇಳಿರಿ

ಹಣ ಕುರ್ಚಿ ಅಧಿಕಾರ ಎಂಬ

ದಾಹವನ್ನು ಬಿಟ್ಟು ಮನುಷ್ಯರಾಗಿರಿ

ನಮ್ಮ ಹಿರಿಯರು ನಮಗಾಗಿ ಜೀವತೆತ್ತು ಕೊಟ್ಟು ಹೋದ

ಭರತ ನಾಡನ್ನು ಉಳಿಸಿ ಬೆಳೆಸಲು ದುಡಿಯದಿದ್ದರೂ

ಅಳಿಸಿ ಹರಿದು ಹಂಚಲೂ ಹೋರಾಡದಿರಿ.............

ನಿಮ್ಮ ನಿಮ್ಮ ಮನಗಳಲ್ಲಿ

ಬೋಸ್ ಭಗತ್ ಅಂಬೇಡ್ಕರ್‌ರಲ್ಲಿದ್ದಂತಹ ಚಿಂತನೆಗಳನ್ನು ನೆಟ್ಟು ಬೆಳೆಸದಿದ್ದರೂ

ಮೋಸ ಧಗ ವಂಚನೆ ಎಂಬ ಬ್ರಿಟಿಷರನ್ನು ಬಂದು ನೆಲೆಸಲು ಬಿಡಬೇಡಿ................

ಪಾಂಡವರಂತಹ ನಾಯಕರನ್ನು ಅಧಿಕಾರಕ್ಕೆ ತರದಿದ್ದರೂ

ಅಲ್ಪ ಆಸೆಗೆ ಬಲಿಯಾಗಿ ಕೌರವರಂತಹ ನಾಯಕರನ್ನು ಆರಿಸದಿರಿ

ಮುಂಬರುವ ನಮ್ಮ ನಾಡಿನ ಪ್ರಜೆಗಳಾಗುವ

ನಮ್ಮ ನಮ್ಮ ಮಕ್ಕಳುಗಳಿಗೆ

ರಾಮ ರಾಜ್ಯವನ್ನು ನಿರ್ಮಾಣ ಮಾಡದಿದ್ದರೂ

ರಾವಣ ರಾಜ್ಯವನ್ನು ಸೃಷ್ಟಿಸದಿರಿ...................



ಇಂದಿರಾ ವೈ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ವ್ಯಕ್ತಿ ಸಂಪನ್ನ ಗೊಂಡರೆ ರಾಷ್ಟ್ರ ಸಂಪತ್ತು

ರಾಷ್ಟ್ರವೆಂದರೆ ಜನ ಭೂಮಿ ಮತ್ತು ಕಟ್ಟಡಗಳ ಗುಚ್ಚವಲ್ಲ ಅದು ನಾವ್ರೊಂದು ರಾಷ್ಟ್ರವಾಗಿ ಬೆಳೆಯಬೇಕು ಶಕ್ತವಾಗಬೇಕು ಅಂದರೆ ಮೊದಲು ಮಾಡಬೇಕಾದ ಕೆಲಸ ಜನರನ್ನು ಶಕ್ತರನ್ನಾಗಿಸುವುದು ಅಂದರೆ ಭೌತಿಕ ಸಂಪತ್ತು ಅಥವಾ ತಾಂತ್ರಿಕತೆಯನ್ನು ಹೆಚ್ಚಿಸುವುದು ಎಂದಲ್ಲ ಇದು ಸಂಪೂರ್ಣವಾಗಿ ಆಂತರಿಕಕ್ರಿಯೆ. ಅಗತ್ಯಪ್ರಜ್ಞೆ ಆಂತರಿಕ ಸಮತೋಲನ ಇಲ್ಲದಿರುವುದರಿಂದ ಮತ್ತು ವ್ಯಕ್ತಗತವಾಗಿ ಇರುವ ವ್ಯತ್ಯಾಸಗಳಿಂದ ಸಾಮೂಹಿಕವಾಗಿ ಋಣಾತ್ಮಕ ಚಿಂತನೆ ಹರಿದಾಡುತ್ತಿದೆ. ಹೀಗೆ ಮಾನವ ಜನಾಂಗ ಅಥವಾ ಇಡೀ ಸಂಸ್ಕೃತಿ ಮುಳುಗಿ ಹೋಗುತ್ತಿದೆ.

ಜನಾಂಗೀಯ ಹತಾಶೆಗಳಿಂದ ಭಾರತವೀಗ ತನ್ನ ದೊಡ್ಡ ಶಕ್ತಿಯನ್ನೆ ಕಳೆದುಕೊಂಡಿದೆ.ಮಹಾನ್ ಆತ್ಮಗಳನ್ನು ಸೃಜಿಸುತ್ತಿದ್ದ ಅದು ಇಡೀ ಭೂಗ್ರಹಕ್ಕೆ ಶಾಂತಿ ನೀಡುವಂತವ್ಯಕ್ತಿತ್ವ ಸೃಷ್ಟಿಯ ಕಾರ್ಖಾನೆಯಾಗಿತ್ತು.

ನಮಗೆಲ್ಲಾ ಗೊತ್ತಿರುವ ಒಂದು ಉದಾಹರಣೆಯಂದರೆ ಅದು ಗೌತಮಬುದ್ದ ಅವನ ಸಾಧನೆಯ ಫಲವನ್ನು ಇಂದಿಗೂ ನಾವು ಅನುಭವಿಸುತಿದ್ದೇವೆ. ರಾಜಕುಮಾರನಾಗಿಯೇ ಇದ್ದರೆ ಅವನು ಇನ್ನಷ್ಟು ಮಂದಿಯನ್ನು ಮದುವೆಯಾಗಿ ಮಕ್ಕಳನ್ನು ಪಡೆದು ಚಿಕ್ಕ ಸಾಮ್ರಾಜ್ಯವನ್ನು ಆಳಿಕೊಂದು ಇರಬಹುದಿತ್ತು, ಆದರೆ ಆತ್ಮಸಾಕ್ಷಾತ್ಕಾರ ಹೊಂದಿದ ಗುರುವಾಗಿ ಭೂಗ್ರಹದ ಜೀವನ ವಿಧಾನವನ್ನೆ ಆತ ಬದಲಿಸಿದ, ನಾವು ಅದನ್ನು ಗೌರವಿಸುವುದು ನಾವು ಅದರ ಸಂತಾನವೆಂದಲ್ಲ ಗೌರವಿಸಲು ಇರುವ ನೈಜ ಕಾರಣ ಈ ಸಂಸ್ಕೃತಿ ಮಹಾನ್ ವ್ಯಕ್ತಿಗಳನ್ನು ಸೃಷ್ಟಿಸುವ ಜ್ಞಾನವನ್ನು ಪರಿಪೂರ್ಣಗೊಳಿಸಿದೆ ಎನ್ನುವುದು ಒಂದು ಕಾಲವಿತ್ತು, ಆಗ ಕೆಲವೇ ವ್ಯಕ್ತಿಗಳು ಸಾಧಕರಾಗಿರುತ್ತಿದ್ದರು. ಉಳಿದವರು ಅವರಲ್ಲಿ ಆಶೀರ್ವಾದ ಪಡೆದು ಬದುಕುತಿದ್ದರುಜ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ನಮ್ಮನ್ನು ನಾವೇ ಫಾಸಿ ಮಾದಿಕೊಳ್ಳುತ್ತಿದ್ದೇವೆ, ಏಕಂದರೆ ಇಂದು ಪ್ರತಿಯೊಬ್ಬರು ಸಾಧಕರಾಗಬೇಕಾದ ಪರಿಸ್ಥಿತಿ ಇದೆ ಭೂಗ್ರಹದಲ್ಲಿರುವ ಜೀವಿಗಳಲ್ಲಿ ಏಕತೆ ಬರದಿದ್ದರೆ ನಾಯಕರಿಗೆ ಅದು ಸಾಧ್ಯವಾಗದಿದ್ದರೆ ನಮ್ಮನ್ನು ನಾವೇ ಕೊಂದುಕೊಳ್ಳುವುದು ಎಂದಿಗೂ ಪ್ರಸ್ತುತ ಘಟನೆ ಎನಿಸುತ್ತದೆ.



ರುಖಿಯಾ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಚೀನಾ ಮಹಾಗೋಡೆ**

ವಿವಿಧ ಪರಂಪರೆಯ ರಾಜವಂಶಗಳ ಅವಧಿಯಲ್ಲಿ ಕಂಡುಬಂದ ಚೀನಾ ಸಾಮ್ರಾಜ್ಯದ ಉತ್ತರ ಗಡಿ ಭಾಗಗಳನ್ನು ರಕ್ಷಿಸಲು ಕ್ರಿ.ಪೂ ಐದನೇ ಶತಮಾನ ಮತ್ತು 16ನೇ ಶತಮಾನದ ನಡುವೆ ನಿರ್ಮಿಸಿ, ಮರು ನಿರ್ಮಿಸಿ ನಿರ್ಮಾಣ ಮಾಡಲ್ಪಟ್ಟ ಕೋಟೆಗಳ ನಿರ್ಮಾಣಗಳ ಸರಣಿ ಯಾಗಿದೆ.ಈ ಮಹಾಗೋಡೆಯ ಪ್ರಸಿದ್ದ ಗೋಡೆಯನ್ನು ಕ್ರಿ.ಪೂ 220 ರಿಂದ ಕ್ರಿ.ಪೂ 206ರ ವರೆಗೆ ಚೀನಾದ ಸಾಮ್ರಾಟರಾದ ಕ್ಯೂ ಶಿ ಹ್ಯೂಯಾಂಗರವರು ನಿರ್ಮಿಸಿದರು. ಇದರ ಬಹುತೇಕ ಕಟ್ಟಡಗಳನ್ನು ಮಿಂಗ್ ಸಂತತಿಯು ನಿರ್ಮಿಸಿದೆ 1987 ರಲ್ಲಿ ಇದನ್ನು ಯುನೆಸ್ಕೊ ವಿಶ್ವಪರಂಪರೆ ಪಟ್ಟಿಗೆ ಸೇರಿಸಲಾಗಿದೆ. ಈ ಮಹಾ ಗೋಡೆಯು 8.851.8 ಕಿ,ಮೀ ಉದ್ದವಿದೆ ಇದು ವೈರಿಗಳ ಚಲನೆಯನ್ನು ಕುರಿತು ರಕ್ಷಕ ಸೈನ್ಯವನ್ನು ಎಚ್ಚರಿಸುವ ಮತ್ತು ಅವರ ಸೈನ್ಯದ ಬಲವನ್ನು ಹೆಚ್ಚಿಸುವ ಸಾಮರ್ಥ್ಯವು ಸೇರಿದಂತೆ ಸೇನಾ ತುಕಡಿಗಳ ನಡುವಿನ ಸಂವಹನವನ್ನು ಹೆಚ್ಚಿಸುವ ಉದ್ದೇಶದಿಂದ ಈ ಗೋಡೆಯನ್ನು ನಿರ್ಮಿಸಲಾಗಿದೆ.



ಗಾಯಿತ್ರಿ ಡಿ ಎಸ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**ಎಲ್ಲಿಹರು ನಾಯಕರು**

ಬೀದಿ ದೀಪ ಸುಟ್ಟಿದೆ
ಕರಾಳ ಕತ್ತಲ ನಡುವೆ
ಬೊಗಳುತಿದೆ ನಾಯಿ
ಬೆಂದಕಾಳೂರಿನಲ್ಲಿ
ಕಣ್ಣಿಗೆ ಎಣ್ಣೆ ಹಾಕಿಕೊಂಡು
ಸೇವೆ ಮಾಡುವ ನಾಯಕರು
ಎಲ್ಲಿಹರೋ ಎಣ್ಣೆಬಿಡ್ಕೊಂಡು
ಎಣ್ಣೆ ಮುಗಿದು ಬತ್ತಿ ಸುಟ್ಟು
ಸೊಡರು ಆರುವ ಮುನ್ನ
ಕಡ್ಡಿಗೀರುವರು...........
ಗೀರಿಯಾಗಿದೆ ಇವರು
ಸಟ್ಟು ಕರಕಲಾಗಿದೆ ರೈಲಿನ ಬೋಗಿ
ಹಾಡು ಹಗಲೇ ರೋದನದ ಕೂಗು
ಎಲ್ಲಿಹರೋ ನಮ್ಮ ಸುಲ್ತಾನರು
ದಿಲ್ ಕಳೆದುಕೊಂಡ ದಿಲ್ಲಿಯಲಿ
ಯತ್ರನಾರ್ಯಂತು ಪೂಜ್ಯಂತೆ ರಮಂತೆತತ್ರ ದೇವತಾ:
ಹೂವ ಹಾಸಿಗೆಯಲ್ಲ ಮುಳ್ಳಿನ
ಹಾದಿಯೆಂದು ಗಾದೆಯನೇರಿದವರೆ
ನಿಮ್ಮ ನಯವಾದ ವಂಚನೆಯ
ಮೃದುವಾದ ಗಾದಿ ಭಾರಕೆ
ಮುಳ್ಳುಗಳು ಮೊಂಡಾಗಿವೆ
ಚುಚ್ಚದಿರುವ ಮುಳ್ಳಿಂದ
ರಕ್ತ ಹೇಗೆ ಚಿಮ್ಮೀತು?
ಬದಲಾಗಿ ಇಲ್ಲವೇ ಬಲಿಯಾಗಿ
ರಕ್ತದೋಕುಳಿ ಹರಿದೀತು



ದಿವ್ಯಜ್ಯೋತಿ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

# ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

"ನಹೀ ಜ್ಞಾನೇನ ಸದೃಶ್ಯಂ" "ಪವಿತ್ರ ಮೇವ ವಿದ್ವತ್" ಇದರ ಅರ್ಥವೇನೆಂದರೆ ಜ್ಞಾನಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ, ಮನುಷ್ಯ ವಿದ್ಯೆಯಿಲ್ಲದೆ ಏನನ್ನೂ ಸಾಧಿಸಲಾರ. ಮನುಷ್ಯ ಭೂಮಿಗೆ ಬಂದ ಮೇಲೆ ಶಿಕ್ಷಣದಿಂದಲೇ ಒಬ್ಬ ಒಳ್ಳೆಯ ಮಾನವನಾಗಿ ದೇಶದಲ್ಲಿ ಬಾಳುತ್ತಾನೆ.

ವಿದ್ಯೆಯಿಂದಲೇ ನಾವು ಯಾವುದಾದರೂ ಒಂದು ಸಾಧನೆಯನ್ನು ಮಾಡಬಹುದು. ಆಗ ಮಾತ್ರ ನಮ್ಮ ದೇಶವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಬಹುದು. ಆದರೆ ನಮ್ಮ ದೇಶದಲ್ಲಿ ಬಹಳಷ್ಟು ಅನಕ್ಷರಸ್ಥರು ಇದ್ದಾರೆ. ಅನಕ್ಷರಸ್ಥರ ಸಂಖ್ಯೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಕಾರಣ ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ಬಡತನ, ಮನೆಗೆಲಸ, ಕೂಲಿ ಮಾಡುವುದು. ಆದ್ದರಿಂದ ಸರ್ಕಾರವು ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸಿದೆ. ಈ ಮಕ್ಕಳು ಶಿಕ್ಷಣವನ್ನು ಪಡೆದು ದೇಶದ ಪ್ರಗತಿಗೆ ಸಹಕಾರಿಯಾಗಬಹುದು. ಹಿಂದಿನ ಕಾಲದಲ್ಲಿ ಶಿಕ್ಷಣಕ್ಕೆ ಬೆಲೆಯೇ ಇರಲಿಲ್ಲ. ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆಕಳುಹಿಸುವುದೋ ಬೇಡವೋ ಎಂಬ ದ್ವಂದ್ವ ಮನಸ್ಸಿನಲ್ಲಿದ್ದರು. ಕಾರಣ ಆ ಕಾಲದಲ್ಲಿ ಮಕ್ಕಳು ಶಾಲೆಗೆ 5–6 ಮೈಲುಗಳಷ್ಟು ದೂರ ನಡೆದುಕೊಂಡು ಹೋಗಬೇಕಾಗಿತ್ತು. ಈಗಿನ ತರಹ ಸೈಕಲ್‌ಗಳನ್ನು ಕೊಂಡುಕೊಳ್ಳುವಷ್ಟು ಹಣ ಸಾಮಾನ್ಯ ಜನರ ಬಳಿ ಇರುತ್ತಿರಲಿಲ್ಲ. ಆದ್ದರಿಂದ ಅವರು ಶಾಲೆಗೆ ಹೋಗುವ ಬದಲು ಹೊಲಗಳಿಗೆ ಕೂಲಿ ಕೆಲಸಕ್ಕೆ ಬಲವಂತವಾಗಿ ಹೋಗುತ್ತಿದ್ದರು. ನಮ್ಮ ಹಿರಿಯರಿಗೂ ಶಿಕ್ಷಣದ ಮಹತ್ವ ತಿಳಿದಿರಲಿಲ್ಲ. ಕಾರಣ ಅವರು ಸಹ ಅನಕ್ಷರಸ್ಥರು, ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಬಾಲ್ಯ ವಿವಾಹ ಮಾಡಿ ಕಳುಹಿಸುತ್ತಿದ್ದರು. ಈಗಲೂ ಅದು ಕೆಲವೊಂದು ಕಡೆ ನಡೆಯುತ್ತಲೇ ಇದೆ. ಆದ್ದರಿಂದ 1979 ರಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ಬಂದಿತು. ನಮ್ಮ ಭಾರತದಲ್ಲಿ ಜನಗಣತಿ ಪ್ರಕಾರ ಅಕ್ಷರಸ್ಥರ ಪ್ರಮಾಣ ಕೇವಲ 18% ರಷ್ಟು ಇತ್ತು. ಆದರೆ 2001 ರ ಜನಗಣತಿ ಪ್ರಕಾರ ಅಕ್ಷರಸ್ಥರ ಪ್ರಮಾಣ 82.87& ರಷ್ಟಿದೆ. ನಮ್ಮ ದೇಶದಲ್ಲಿ ಒಟ್ಟು ಸಾಕ್ಷರರಲ್ಲಿ ಪುರುಷ ಸಾಕ್ಷರತ ಪ್ರಮಾಣ ಹೆಚ್ಚಿದ್ದು, ಮಹಿಳಾ ಸಾಕ್ಷರತೆ ಪ್ರಮಾಣ ಕಡಿಮೆ ಇದೆ. ಆದರೂ ಈಗಿನ ಕಾಲದಲ್ಲೂ ಬಾಲ್ಯ ಕಾರ್ಮಿಕತೆ, ಬಾಲ್ಯವಿವಾಹ, ಮಹಿಳೆಯರ ಶೋಷಣೆನಡೆಯುತ್ತಲೇ ಇದೆ. ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ಭಾರತ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಚಿಣ್ಣರ ಅಂಗಳ. ಬಿಸಿಯೂಟ ಯೋಜನೆ, ಉಚಿತ ಸೈಕಲ್ ವಿತರಣೆ, ಚಿಣ್ಣರ ಜಿಲ್ಲಾ ದರ್ಶನ, ಕೂಲಿಯಿಂದ ಶಾಲೆಗೆ, ಬಾ ಮರಳಿ ಶಾಲೆಗೆ, ನಲಿ–ಕಲಿ ಇನ್ನು ಮುಂತಾದ ಕಾರ್ಯಕ್ರಮಗಳನ್ನು ಜಾಇಗರ ತಂದಿದೆ. ಆದರೂ ಮಕ್ಕಳು ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದೇಶದ ಅಭಿವೃದ್ದಿಗೆ ಶಿಕ್ಷಣ ಬಹಳ ಮುಖ್ಯ. ನಾವು ಸಂಪೂರ್ಣವಾಗಿ ಶಿಕ್ಷಣ ಕಲಿತರೆ

ಯಾವುದೇ ದೇಶಗಳಿಗೆ ಹೋದರೂ ನಾವು ಜೀವನ ಸಾಗಿಸಬಹುದು. ಸಾಕ್ಷರತೆಯ ಪ್ರಮಾಣದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಳವಾಗಬೇಕು. ಮಕ್ಕಳನ್ನು ಕೂಲಿಗೆ ಕಳುಹಿಸುವ ಬದಲು ಶಾಲೆಗೆ ಹೋಗಲು ರಾಜಕಾರಣಿಗಳು, ಶ್ರೀಮಂತರು, ಉದಾರಿಗಳು ಧನ ಸಹಾಯ ಮಾಡಬೇಕು. ಹಿಂದಿನ ಕಾಲದಲ್ಲಿ ಹತ್ತು ಊರಿಗೆ ಒಂದು ಶಾಲೆ ಇತ್ತು. ಆದರೆ ಈಗ ಪ್ರತಿಯೊಂದು ಹಳ್ಳಿಗೂ ಒಂದು ಪ್ರಾಥಮಿಕ ಶಾಲೆ ಇದೆ. ನಲಿ–ಕಲಿ, ಚಿಣ್ಣರ ಅಂಗಳ, ಬಾ ಮರಳಿ ಶಾಲೆಗೆ ಇಂತಹ ಹಲವಾರು ಯೋಜನೆಗಳನ್ನು ಸರ್ಕಾರ ಬಡ ಮಕ್ಕಳಿಗಾಗಿ ಹಮ್ಮಿಕೊಂಡಿದೆ. ಮಕ್ಕಳು ಶಿಕ್ಷಣ ಕಲಿತರೆ ದೇಶದ ಅಭಿವೃದ್ದೀಯಾಗುತ್ತದೆ. ಮಕ್ಕಳನ್ನು ಶಾಲೆಗೆ ಕಳುಹಿಸಿ, ಅವರು ವಿದ್ಯಾವಂತರಾಗಿ ದೇಶದ ಅಭಿವೃದ್ಧಿಗೆ ತಮ್ಮ ಕೆಲಸದ ಸಹಾಯ ಮಾಡಬೇಕಾಗಿದೆ.



ರಂಜಿತಾ ಡಿ ಎ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಮೊಬೈಲ್ ಸಾಮ್ರಾಜ್ಯ

ನಮ್ಮ ಬದುಕೇ ಮೊಬೈಲ್ ಬದುಕು. ಮೊಬೈಲ್ ಇಲ್ಲದೇ ಜೀವನವೇ ಇಲ್ಲ ಎಂಬ ದುಃಸ್ಥಿತಿ ಜನರಿಗೆ ಬಂದೊದಗಿದೆ. ಆಡುವ ಮಕ್ಕಳಿಂದ ಹಿಡಿದು ವಯಸ್ಸಾದ ಮುದುಕರವರೆಗೂ ಮೊಬೈಲ್ ಅಷ್ಟೊಂದು ಪ್ರಭಾವ ಬೀರಿದೆ ಎಂದರೆ, ಆದರ ಮಾಯಾಶಕ್ತಿ ಮೆಚ್ಚಬೇಕು.

ಈ ಮೊಬೈಲ್ ಸುಮ್ಮನೆ ಬೆಳಕಿಗೆ ಬಂದಿಲ್ಲ. ಅದು ತನ್ನದೇ ಆದಂತಹ ಸದುದ್ದೇಶವನ್ನು ಇಟ್ಟುಕೊಂಡೇ ಪ್ರಪಂಚಕ್ಕೆ ಕಾಲಿಟ್ಟಿದೆ. ಅಂದರೆ ಪ್ರತಿಯೊಬ್ಬರಲ್ಲಿಯೂ ಮೊಬೈಲ್ ಇರುವುದು ಇದರ ಮೂಲ ಉದ್ದೇಶ. ಇದರಿಂದ ಕೆಲವೊಂದು ಅನುಕೂಲವೂ ಇದೆ ಹಾಗೂ ಅನಾನುಕೂಲವೂ ಇದೆ ಎಂದು ಹೇಳಬಹುದು. ಆದರೆ ಅದರ ಬಳಕೆ ಮಾತ್ರ ಮಿತಿಮೀರಿದೆ.

ಮೊದಲೇ ಭಾರತದಲ್ಲಿ ನಿರುದ್ಯೋಗ, ಆರ್ಥಿಕ ಸಮಸ್ಯೆಗಳು ತಾಂಡವವಾಡುವಾಗ ಈ ಆಯುಧವು "ಹೊಟ್ಟೆಗೆ ಹಿಟ್ಟಿಲ್ಲದೆ ಜುಟ್ಟಿಗೆ ಮಲ್ಲಗೆ ಹೂ"ನಂತೆ ನಮ್ಮ ಪ್ರಪಂಚಕ್ಕೆ ಆಗಮಿಸಿದೆ.

ಇದು ಮೊದಲು ವಿದೇಶದಲ್ಲಿ ಬೆಳಕಿಗೆ ಬಂದಿದ್ದು, ನಂತರ ನಮ್ಮ ದೇಶಕ್ಕೆ ಬಂದಿದೆ. ಆರ್ಥಿಕವಾಗಿ ಮುಂದುವರೆದಂತಹ ದೇಶಗಳಲ್ಲಿ ಅಲ್ಲಿನ ಜನರ ಸಮಯ ತುಂಬಾ ಕಡಿಮೆಯಿರುವುದರಿಂದ ಮುಖ್ಯವಾಗಿ ಜನಸ್ಖ್ಯೆ ಅಷ್ಟೇ ವಿರಳವಿರುವುದರಿಂದ ಅವರಿಗೆ ಎಲ್ಲಾ ರೀತಿಯಿಂದಲೂ ಸಮನಾಗಿ ಮೊಬೈಲ್ ಅವಶ್ಯಕವಾಗಿರುತ್ತದೆ. ಅಂದರೆ ಅಂತಹವರಿಗೇ ಇದು ಯೋಗ್ಯವಾದ ವಸ್ತು.

ಆದರೆ ನಮ್ಮ ದೇಶದಲ್ಲಿ ಅಂತಹ ವ್ಯಕ್ತಿಗಳು ತುಂಬಾ ವಿರಳ. ಕೆಲಸವಿಲ್ಲದೆ ಸಮಯ ಹೇಗೆ ಕಳೆಯೋದಪ್ಪ ಎಂದು ದುಃಖಿಸುವ ದೇಶ ನಮ್ಮದು. ಇಂತಹ ದೇಶಕ್ಕೆ ಮೊಬೈಲ್ ಖಂಡಿತ ಅವಶ್ಯಕವಲ್ಲ. ಇದ್ದರೂ ಕೆಲವರಿಗೆ ಮಾತ್ರ. ಆದರೆ ಮೊಬೈಲ್‌ನ ಉಪಯೋಗ ಎಲ್ಲೆ ಮೀರಿದೆ. ರಾಜಕಾರಣಿಗಳು, ವ್ಯಾಪಾರಸ್ಥರು, ನೌಕರಿದಾರರು, ಯುಕ–ಯುವತಿಯರು, ಬೀದಿಯ ಕಸಗುಡಿಸುವವರು ಹಾಗೂ ಭಿಕ್ಷೆ ಬೇಡುವವರೆಗೂ ಹರಿದು ಬಂದಿದೆ ಈ ಚೋಟಾ ಮೊಬೈಲ್.

ದೇವಸ್ಥಾನದಲ್ಲಿ ಪೂಜೆ ಮಾಡುವ ಅರ್ಚಕನಿಗೆ ಮಂತ್ರ ಹೇಳುವಾಗ ಇತ್ತ ತನ್ನ ಮೊಬೈಲ್ ಯಾವಾಗ ಶಬ್ಧಮಾಡಿ ಬಿಡುತ್ತದೆಯೋ ಎಂಬ ಗಾಬರಿ ಅವನ ಗಮನವೆಲ್ಲಾ ಅದರ ಮೇಲೆ ಇರುತ್ತದೆ. ಇಂತಹ ಪ್ರಸಂಗಗಳು ಪ್ರತಿದಿನವೂ ನಾವು ನೋಡುವಂತಹದ್ದೇ ಆಗಿದೆ.

ಮುಖ್ಯವಾಗಿ ಎಲ್ಲರನ್ನೂ ಸೆರೆಹಿಡಿಯುವಂತಹ ದೂರದರ್ಶನಗಳಲ್ಲಿ ಈಗಿನ ಜಾಹೀರಾತು, ಧಾರವಾಹಿ, ಸಿನಿಮಾಗಳಲ್ಲಂತೂ ಮೊಬೈಲ್ ಬಳಕೆ ತುಂಬಾ ಕಂಡುಬರುತ್ತಾದೆ. ಜನರು ಇವುಗಳಿಂದಲೂ ಪ್ರಭಾವಿತರಾಗಿ ಮೊಬೈಲ್‌ನ ಕಡೆಗೆ ಹಿಚ್ಚು ಆಕರ್ಷಿತರಾಗುವ ಸಾಧ್ಯತೆಗಳು ಇವೆ.

ಕಾಲೇಜ್ ಲೈಫ್‌ನಲ್ಲಂತೂ ಈಗಿನ ಟೀನೇಜ್ ಹುಡುಗ–ಹುಡುಗಿಯರಿಗೆ ಮೊಬೈಲ್ ಒಂದು ಶೋಕಿಯ ವಸ್ತುವಾಗಿದೆ. ಮೊಬೈಲ್ ಇದ್ದರೆ ನಮಗೆ ಗೌರವ ಎಂಬ ಮಂದ ಬುದ್ಧಿ ಬೆಳೆದು ಕೆಲವು ವಿದ್ಯಾರ್ಥಿಗಳಿಗೆ ಅವರ ಬಳಿ ಪುಸ್ತಕ, ಪೆನ್ನು, ಇರುತ್ತದೆಯೋ ಇಲ್ಲವೋ ಅಥವಾ ಮರೆತಿರುತ್ತಾರೋ ಆದರೆ ಮೊಬೈಲ್ ಶಬ್ಧ ಆಲಿಸುವುದು, ರಿಂಗ್ ಆದರೆ ತಕ್ಷಣ ಅಲ್ಲಿಮದ ಎದ್ದೇ ಹೊರಟು ಹೋಗುವುದು ಇಂತಹ ಅದ್ಭುತಗಳು ನಡೆಯುತ್ತಿರುವಂತಹುದ್ದೇ ಆಗಿದೆ.

ಬೆಳಗಾದರೆ ದಿನಪತ್ರಿಕೆಯಲ್ಲಿ ಓದುವ ರಸ್ತೆ ಅಪಘಾತಗಳು, ದುರಂತಗಳಲ್ಲಿ ಕೆಲವು ಈ ಮೊಬೈಲಿನಿಂದಲೇ ಎಂದು ಹೇಳಬಹುದು.

ಹೆಚ್ಚಾಗಿ ಪಟ್ಟಣಗಳಲ್ಲಿಯೇ ಬಳಕೆಯಲ್ಲಿದ್ದಂತಹ ಮೊಬೈಲ್ ಹಳ್ಳಿ–ಹಳ್ಳಿಗಳಿಗೂ ಧಾವಿಸಿದೆ. ನೆಮ್ಮದಿಯಿಂದ ವ್ಯವಸಾಯ ಮಾಡಿಕೊಂಡಿದ್ದ ರೈತರು ಮೊಬೈಲ್‌ಗೆ ಆಕರ್ಷಿತರಾಗಿದ್ದಾರೆ.



ಮೀನಾಕ್ಷಿ ಗಿರಿಸಿನಕೊಪ್ಪ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಚಿತ್ತರಂಜನ ದಾಸ್



ಚಿತ್ತರಂಜನ ದಾಸ್ ಬಂಗಾಳದ ಢಾಕಾದ ಬಿಕ್ರಾಪುರ್ನ ಟೆಲಿರ್ಬಾಗ್ನ ಪ್ರಸಿದ್ಧ ಬೈಡಿಯಾ– ಬ್ರಹ್ಮನ್ ದಾಸ್ ಕುಟುಂಬದಲ್ಲಿ (ನವೆಂಬರ್5, 1870 – ಜೂನ್ 16, 1925) ಜನಿಸಿದರು. ಅವರನ್ನು ಭಾರತದ ಜನತೆ ಪ್ರೀತಿಯಿಂದ ದೇಶಬಂಧು ಎಂದು ಕರೆದರು. ಸ್ವಾತಂತ್ರ ಚಳುವಳಿಯ ಪ್ರಮುಖರಲ್ಲಿ ಪ್ರಮುಖರಾದ ಇವರು ವೃತ್ತಿಯಿಂದ ವಕೀಲರಾಗಿದ್ದರು.

ಇಂಗ್ಲೆಂಡಿನಲ್ಲಿ ಕಾನೂನನ್ನು ಅಭ್ಯಾಸ ಮಾಡಿದ ಇವರು 1909 ರಲ್ಲಿ ನೆಡೆದ 'ಅಲಿಪುರ ಸ್ಫೋಟದಲ್ಲಿ ಶ್ರೀ ಅರವಿಂದ ಘೋಷ್ ಅವರನ್ನು ನ್ಯಾಯಾಂಗದ ಆರೋಪದಿಂದ ಮುಕ್ತಗೊಳಿಸಿದರು.1894ರಲಿ ಬೆರಗೊಳಿಸಿದ ಚಿತ್ತರಂಜನ್ ದಾಸ್ ತನ್ನ ಲಾಭದಾಯಕ ಅಭ್ಯಾಸವನ್ನು ಕೈಬಿಟ್ಟರು ಮತ್ತು ಬ್ರಿಟಿಷರ ವಿರುದ್ದ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ರಾಜಕೀಯಕ್ಕೆ ಹೆಗ್ಗುರುತಾಗಿ ಮುಳುಗಿತು. 1909 ರಲ್ಲಿ ಅಲಿಪೋರ್ ಬಾಂಬ್ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಚಿತ್ತರಂಜನ್ ದಾಸ್ ಮತ್ತೆ ಅರಬಿಂದೋ ಘೋಷ್ ಅವರನ್ನು ಸಂಕ್ಷಿಪ್ತವಾಗಿ ಸಮರ್ಥಿಸಿಕೊಂಡರು. ಅವರ ಉತ್ತರಾಪಾರಾ ಭಾಷಣದಲ್ಲಿ , ಶ್ರೀ ಅರಬಿಂದೋ ಅವರು ಚಿತ್ತರಂಜನ್ ದಾಸ್ ಅವರನ್ನು ಉಳಿಸಲು ತನ್ನ ಆರೋಗ್ಯವನ್ನು ಮುರಿದುಕೊಂಡಿದ್ದಾರೆ ಎಂದು ಕೃತಜ್ಞರಾಗಿ ಒಪ್ಪಿಕೊಂಡಿದ್ದಾರೆ.

1919–1922ರ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು. ಮತ್ತು ಬ್ರಿಟಿಷ್ ಉಡುಪುಗಳನ್ನು ನಿಷೇಧಿಸಿ, ತಮ್ಮದೇ ಯುರೋಪಿಯನ್ ಯುರೋಪಿಯನ್ ಉಡುಪುಗಳನ್ನು ಸುಟ್ಟು ಮತ್ತು ಖಾದಿ ಬಟ್ಟೆಗಳನ್ನು ಧರಿಸುವುದರ ಮೂಲಕ ಒಂದು ಉದಾಹರಣೆಯಾಗಿದೆ. ಒಂದು ಕಾಲದಲ್ಲಿ, ಆತನ ಬಟ್ಟೆಗಳನ್ನು ಪ್ಯಾರಿಸ್ನಲ್ಲಿ ಸರಿಹೊಂದಿಸಿ ತೊಳೆದುಕೊಂಡು ಪ್ಯಾರಿಸ್ನಲ್ಲಿ ತಮ್ಮ ಬಟ್ಟೆಗಳನ್ನು ಕೊಲ್ಕತ್ತಾಗೆ ಸಾಗಿಸಲು ಅವರು ಶಾಶ್ವತ ಲಾಂಡ್ರಿ ನಿರ್ವಹಿಸಿದರು. ಹೀಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಚಿತ್ತರಂಜನ್ ಆರೋಗ್ಯವು ಚೇತರಿಸಿಕೊಳ್ಳದೆ, 16 ಜೂನ್ 1925 ರಂದು ಅವರು ತೀವ್ರ ಜ್ವರದಿಂದ ಮೃತಪಟ್ಟರು. ನಂತರ ಕಲ್ಕತ್ತಾದಲ್ಲಿ ಇವರ ಅಂತ್ಯಕ್ರಿಯೆ ಮಾಡಲಾಯಿತು.



ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಅನ್ನಿಬೆಸೆಂಟ್



ಅನ್ನಿಬೆಸೆಂಟ್ ರವರು 1 ಅಕ್ಟೋಬರ್ 1847 ರಲ್ಲಿ ಲಂಡನ್‌ನಲ್ಲಿ ಜನಿಸಿದರು. ಪ್ರಖ್ಯಾತ ಥಿಯೋಸೊಫಿಸ್ಟ್, ಮಹಿಳಾ ಹಕ್ಕುಗಳ ಕ್ರಾಂತಿಕಾರಿ, ಬರಹಗಾರ್ತಿ ಮತ್ತು ವಾಗ್ಮಿ ಮತ್ತು ಐರಿಷ್ ಮತ್ತು ಭಾರತದ ಸ್ವ–ಆಡಳಿತದ ಬೆಂಬಲಗಾರ್ತಿ. 1873ರಲ್ಲಿ ಅವರು ಫ್ರಾಂಕ್ ಬೆಸೆಂಟ್ ಅವರನ್ನು ವಿವಾಹವಾದರು ಮತ್ತು ಲಂಡನ್‌ಗೆ ತೆರಳಿದರು. ಅಲ್ಲಿ ಅವರು ನ್ಯಾಷನಲ್ ಸೆಕ್ಯುಲರ್ ಸೊಸೈಟಿಯ ಒಬ್ಬ ಪ್ರಖ್ಯಾತ ಸಭಾಪತಿ ಮತ್ತು ಬರಹಗಾರ್ತಿ ಹಾಗೂ ಚಾರ್ಲ್ಸ್ ಬ್ರಾಡ್ಲಾಗ್।ನ್ಯಾಷನಲ್ ಸೆಕ್ಯುಲರ್ ಸೊಸೈಟಿಯ ಒಬ್ಬ ಪ್ರಖ್ಯಾತ ಸಭಾಪತಿ ಮತ್ತು ಬರಹಗಾರ್ತಿ ಹಾಗೂ ಚಾರ್ಲ್ಸ್ ಬ್ರಾಡ್ಲಾಗ್‌ರ ಆಪ್ತ ಗೆಳತಿಯಾದರು.

ಜನನ ನಿಯಂತ್ರಣ ಚಳುವಳಿಗಾರ ಚಾರ್ಲ್ಸ್ ನೋಲ್ಟನ್‌ರಿಂದ ಒಂದು ಪುಸ್ತಕವನ್ನು ಬಿಡುಗಡೆ ಮಾಡಿಸಿದ ಕಾರಣಕ್ಕಾಗಿ 1877ರಲ್ಲಿ ಅವರುಗಳ ಮೇಲೆ ಕಾನೂನು ಕ್ರಮ ಜರುಗಿಸಲಾಯಿತು.

1890ರಲ್ಲಿ ಅನ್ನಿಬೆಸೆಂಟ್ ಹೆಲೆನಾ ಬ್ಲಾವಟ್ಸಕಿಯನ್ನು ಭೇಟಿಯಾದರು ಮತ್ತು ನಂತರದ ಕೆಲವು ವರ್ಷಗಳಲ್ಲಿ ದೇವತಾ ತತ್ವಜ್ಞಾನ ಯೋಗದಲ್ಲಿ ಅವರ ಆಸಕ್ತಿ ಬೆಳೆಯಿತು ಮತ್ತು ಸಮಾಜವಾದಿ ರಾಜಕೀಯದಲ್ಲಿ ಅವರ ಆಸಕ್ತಿ ಕ್ಷಿಣಿಸಿತು. ಅವರು ಭಾರತಕ್ಕೆ ಪ್ರಯಾಣಿಸಿದರು ಮತ್ತು 1988 ರಲ್ಲಿ ಕೇಂದ್ರಿಯ ಹಿಂದೂ ಕಾಲೇಜನ್ನು ಭಾರತದಲ್ಲಿ ಸ್ಥಾಪಿಸಲು ಸಹಾಯಮಾಡಿದರು.

1908ರಲ್ಲಿ ಅನ್ನಿಬೆಸೆಂಟ್ ದೇವತಾ ತತ್ವಜ್ಞಾನ ಯೋಗ ಸಮಾಜದ ಅಧ್ಯಕ್ಷರಾದರು ಮತ್ತು ಸಮಾಜವನ್ನು ಭೌದ್ಧಧರ್ಮದಿಂದ ದೂರ ಮತ್ತು ಹಿಂದೂ ಧರ್ಮದ ಕಡೆ ನಿರ್ದೇಶಿಸಲು ಪ್ರಾರಂಭಿಸಿದರು. ಅವರು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರುವ ಮೂಲಕ ಅವರನ್ನು ಭಾರತದ ರಾಜಕೀಯದಲ್ಲಿ ಸಹ ತೊಡಗಿಸಿಕೊಂಡರು. ಭಾರತದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಚಳುವಳಿಗಾಗಿ ಭಾರತದಲ್ಲಿ ಹೋಂ ರೂಲ್ ಲೀಗ್ ಮತ್ತು ಸಾಮ್ರಾಜ್ಯದ ಒಳಗಡೆ ಆಡಳಿತದ ಸ್ಥಾನಮಾನವನ್ನು ಸ್ಥಾಪಿಸಲು ಅವರು ಸಹಾಯ ಮಾಡಿದರು. ಅದು 1917 ಕೊನೆಯಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅವರು ಚುನಾವಣೆಯಲ್ಲಿ ಅಧ್ಯಕ್ಷೆಯಾಗಿ ಆಯ್ಕೆಯಾಗುವಂತಹ ಉಚ್ಚಮಟ್ಟವನ್ನು ತಲುಪಿತು. ಯುದ್ಧ ನಂತರ ಆಕೆ 1933ರಲ್ಲಿ ಅವರ ಸಾವಿನವರೆಗೆ ಭಾರತದ ಸ್ವಾತಂತ್ರಕ್ಕಾಗಿ ಚಳುವಳಿಗಳನ್ನು ಮುಂದುವರಿಸಿದರು.



ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಗಂಗಾನದಿಯ ಶುದ್ಧೀಕರಣ

ಗಂಗಾ ನದಿಯು ಉತ್ತರ ಪ್ರದೇಶ ಬಿಹಾರ ಜಾರ್ಖಂಡ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುವಾಗ ಸುಮಾರು 42ಕೋಟಿ ಜನರಿಗೆ ಆಸರೆಯಾಗಿದೆ. ಆದರೆ ಅತಿಯಾದ ಕೈಗಾರಿಕೆಗಳು ತ್ಯಾಜ್ಯವನ್ನು ವಿವೇಚನಾ ರಹಿತವಾಗಿ ನದಿಗೆ ಎಸೆಯುವುದು ಕಸ–ಕಡ್ಡಿ ಅರೆ ಬೆಂದ ಶವಗಳನ್ನು ನದಿಗೆ ಎಸೆಯುವುದು ಸೇರಿದಂತೆ ಹತ್ತಾರು ಮಾನವನ ಕೃತ್ಯಗಳಿಂದಾಗಿ ತೀವ್ರ ಮಾಲಿನ್ಯದಿಂದ ಕೂಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರಗಳು ಗಂಗಾನದಿಯ ಶುದ್ಧೀಕರಣಕ್ಕೆ ಹೆಚ್ಚು ಒತ್ತು ನೀಡಿದೆ. ಗಂಗಾ ನದಿಯ ದಡಗಳಲ್ಲಿರುವ ಹರಿದ್ವಾರ, ಹೃಷಿಕೇಶ, ವಾರಣಾಸಿ, ಕಾನ್ಪುರದಂತಹ ನಗರಗಳ ತ್ಯಾಜ್ಯ ಚರಂಡಿ ನೀರನ್ನು ನದಿಗೆ. ಬಿಡಲಾಗುತ್ತದೆ. ಕಾನ್ಪುರ ನಗರವೊಂದರಲ್ಲಿಯೇ ಒಂದು ದಿನಕ್ಕೆ ಒಂದು ಶತಕೋಟಿ ಲೀಟರ್ ಕಲುಷಿತ ನೀರನ್ನು ನದಿಗೆ ಬಿಡಲಾಗುತ್ತದೆ ಎಂದರೆ ಉಳಿದ ನಗರಗಳ ಮತ್ತು ಕೈಗಾರಿಕೆಗಳ ಕಲುಷಿತ ನೀರಿನ ಪ್ರಮಾಣ ಎಷ್ಟಿರಬಹುದು? ನೀವೇ ಊಹಿಸಿರಿ. ಒಂದು ಅಂದಾಜಿನ ಪ್ರಕಾರು ದಿನನಿತ್ಯ ಗಂಗಾ ನದಿಯಲ್ಲಿ 2ಕೋಟಿ ಜನರು ಸ್ನಾನ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ವಿಶ್ವ ಸಂಸ್ಥೆಯ ವರದಿಯಂತೆ ನಿಗದಿಪಡಿಸಿದ ಪ್ರಮಾಣಕ್ಕಿಂತ ಮೂರು ಸಾವಿರ ಪಟ್ಟು ಹೆಚ್ಚಾದ ರಾಸಾಯನಿಕ ವಸ್ತುಗಳು ಬ್ಯಾಕ್ಟೀರಿಯಗಳು ಸೇರಿಕೊಂಡಿವೆ ಎಂದು ಹೇಳಿದೆ. ಇದನ್ನು ತಪ್ಪಿಸಲು ಕೇಂದ್ರ ಸರಕಾರವು ಪ್ರತೀ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಪ್ರಯೋಜನವಾಗಿಲ್ಲ. ಗಂಗಾನದಿಯ ಮಾಲಿನ್ಯಕ್ಕೆ ಶೇ 80ರಷ್ಟು ಚರಂಡಿ ನೀರು ಕಾರಣವಾಗಿದೆ. ಉಳಿದ ಪ್ರಮಾಣದಲ್ಲಿ ಕಾರ್ಖಾನೆ ತ್ಯಾಜ್ಯಗಳು ಮತ್ತು ಕೃಷಿವಲಯದ ತ್ಯಾಜ್ಯಗಳಾಗಿವೆ ಎಂದು ರಾಷ್ಟ್ರೀಯ ಗಂಗಾ ನದಿ ಪ್ರಾಧಿಕಾರದ ಸದಸ್ಯ ಡಾ॥ಬಿ.ತ್ರಿಪಾಠಿ ಹೇಳಿದ್ದಾರೆ. ನದಿಯ ಮಾಲಿನ್ಯದಿಂದಾಗಿ ನದಿ ನೀರಿನ ಶೇ20ರಷ್ಟು ನೀರಿನ ಹರಿವು ಕಡಿಮೆಯಾಗಿದೆ ಎಂದು ತಜ್ಞರ ವರದಿಗಳು ತಿಳಿಸುತ್ತವೆ. ನದಿ ಪರಿಸರದ ಕಾರ್ಖಾನೆಗಳು ತಮ್ಮ ತ್ಯಾಜ್ಯ ನೀರನ್ನು ನದಿಗೆ ಸೇರಿಸಿ ಬಿಡಬೇಕು ಎಂಬ ನಿಯಮವಿದೆ. ಆದರೆ ಪರಿಸರ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿರುವ ಕಾರ್ಖಾನೆಗಳು ಸೋಸದೆ ಕಲುಷಿತ ನೀರನ್ನು ನದಿಗೆ ಹಾಗೇ ಬಿಡುತ್ತದೆ. ಗಂಗಾ ನದಿ ಶುದ್ಧೀಕರಣಕ್ಕೆ ಆದ್ಯತೆ ನೀಡಿದರು ಈಗಿನ ಕೇಂದ್ರ ಸರಕಾರವು ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಗಂಗಾ ನದಿ ಶುದ್ಧಿಕರಣ ಇಲಾಖೆ (ನವರಾಮಿ ಗಂಗೆ ಅಥವಾ ನಿರ್ಮಲಗಂಗೆ) ಸ್ಥಾಪಿಸಿ ಅದಕ್ಕೆ 2000 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ. ವಿಶ್ವ ಬ್ಯಾಂಕ್‌ನಿಂದ 9000ಕೋಟಿ ರೂಪಾಯಿ ಸಾಲ ಪಡೆಯುವ ಸರಕಾರವು ಈ ಹಣದಲ್ಲಿ ಜಲಸಾರಿಗೆ ,ಪ್ರವಾಸೋದ್ಯಮ ಮತ್ತು ಶುದ್ಧೀಕರಣಕ್ಕೆ ಆದ್ಯತೆ ನೀಡಲಾಗುವುದು ಎಂದು ಹೇಳಿಕೆ ನೀಡಿದೆ. ನದಿ ಮಾಲಿನ್ಯ ತಡೆಯಲಿ ಪ್ರತಿ ನೂರು ಕಿ.ಮೀ ಗೊಂದರಂತೆ ಬ್ಯಾರೆಜ್ ಅಥವಾ ಆಣೆಕಟ್ಟು ಅಭಿವೃದ್ಧಿಪಡಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.



ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಪ್ರಮುಖ 60 ಪಿತಾಮಹರುಗಳು

| | | |
|---|---|---|
| 1. ವಿಜ್ಞಾನದ ಪಿತಾಮಹ | – | ರೋಜರ್ ಬೇಕನ್ |
| 2. ಜೀವಶಾಸ್ತ್ರದ ಪಿತಾಮಹ | – | ಅರಿಸ್ಟಾಟಲ್ |
| 3. ಓಲಂಪಿಕ ಪಂದ್ಯಗಳ ಪಿತಾಮಹ | – | ಪಿಯರನ್ ದಿ ಕೊಬರ್ತಿನ್ |
| 4. ಭಾರತದ ಪತ್ರಿಕೋದ್ಯಮರಂಗದ ಪಿತಾಮಹ | – | ಅಗಸ್ಟ ಹಿಕ್ಕಿಸ್ |
| 5. ಆಧುನಿಕ ವರ್ಗಿಕರಣ ಶಾಸ್ತ್ರದ ಪಿತಾಮಹ | – | ಕರೋಲಸ್ ಲಿನಿಯಸ್ |
| 6. ಭಾರತೀಯ ಸಾರ್ವಜನಿಕ ಸೇವೆಯ ಪಿತಾಮಹ | – | ಕಾರ್ನವಾಲಿಸ್ |
| 7. ಮನೋವಿಶ್ಲೇಷಣಾ ಪಂಥ ಪಿತಾಮಹ | – | ಸಿಗ್ಮಂಡ ಪ್ರಾಯ್ಡ್ |
| 8. ಮೋಬೈಲ್ ಫೋನಿನ ಪಿತಾಮಹ | – | ಮಾರ್ಟಿನ್‌ಕೂಪರ್ |
| 9. ಹೋಮಿಯೋ ಪತಿಯ ಪಿತಾಮಹ | – | ಸ್ಯಾಮ್ಯುಯಲ್ ಹಾನಿಯನ್ |
| 10. ಭಾರತೀಯ ವೈದ್ಯಶಾಸ್ತ್ರದ ಪಿತಾಮಹ | – | ಧನ್ವಂತರಿ |
| 11. ಕರ್ನಾಟಕದ ಪತ್ರಿಕೋದ್ಯಮದ ಪಿತಾಮಹ | – | ಮೊಗ್ಲಿಂಗ್ |
| 12. ಇಮೇಲ್ ನ ಪಿತಾಮಹ | – | ಸಭಿರಾ ಭಟಿಯಾ |
| 13. ಆಧುನಿಕ ಬುದ್ದಿಶಕ್ತಿ ಪರಿಕ್ಷೆಯ ಪಿತಾಮಹ | – | ಆಲ್ ಫ್ರೆಡ ಬೀಲೆ |
| 14. ಆಧುನಿಕಕ್ಷಿಪಣಿತಂತ್ರಜ್ಞಾನದ ಪಿತಾಮಹ | – | ಟಿಪ್ಪು ಸುಲ್ತಾನ್ |
| 15. ವೈದ್ಯಕೀಯಕ್ಷೇತ್ರದ ಪಿತಾಮಹ | – | ಸುಶ್ರುತ್ |
| 16. ಭಾರತಿಯ ಹಸಿರು ಕ್ರಾಂತಿಯ ಪಿತಾಮಹ | – | ಎಂ.ಎಸ್. ಸ್ವಾಮಿನಾಥನ್ |
| 17. ಭಾರತೀಯಕೈಗಾರಿಕಾರಂಗದ ಪಿತಾಮಹ | – | ಜೆಮ್ ಷೆಡ ಜಿ ಡಾಟಾ |
| 18. ಭಾರತದಅಣು ವಿಜ್ಞಾನದ ಪಿತಾಮಹ | – | ಹೋಮಿಜಾಹಂಗೀರ್ ಬಾಬಾ |
| 19. ರೈಲ್ವೆಯ ಪಿತಾಮಹ | – | ಸ್ಟಿಫನ್ ಥಾಮಸ್ |
| 20. ಭಾರತೀಯ ಶ್ವೇತಾಕ್ರಾಂತಿಯ ಪಿತಾಮಹ | – | ವರ್ಗೀಸ್‌ಕುರಿನ್ |
| 21. ಏಷಿಯನ್‌ಕ್ರೀಡೆಯ ಪಿತಾಮಹ | – | ಜೆ.ಡಿ. ಸೊಂಧಿ |
| 22. ವೈಜ್ಞಾನಿಕ ಸಮಾತಾವಾದದ ಪಿತಾಮಹ | – | ಕಾರ್ಲ ಮಾರ್ಕ್ಸ |

23. ಭಾರತೀಯಆರ್ಥಿಕಯೋಜನೆಯಪಿತಾಮಹ – ಪಿ.ವಿ.ನರಸಿಂಹ ರಾವ

24. ಭಾರತೀಯ ಚಲನಚಿತ್ರರಂಗದಪಿತಾಮಹ – ದಾದಾ ಸಾಹೇಬ್ ಪಾಲ್ಕೆ

25. ಕರ್ನಾಟಕ ಸಂಗಮ ಸಂಗೀತದಪಿತಾಮಹ – ಶಿಶುನಾಳ ಷರೀಫ್

26. ಭಾರತೀಯಜ್ಯೋತಿಷ್ಯ ಶಾಸ್ತ್ರದಪಿತಾಮಹ – ರಾಟ್ಸೆಲ್

27. ಭಾರತೀಯರೈಲ್ವೆಯಪಿತಾಮಹ – ಲಾರ್ಡ್‌ಡಾಲ್ ಹೌಸಿ

28. ಆಯುರ್ವೇದದಪಿತಾಮಹ – ಚರಕ್

29. ಯೋಗಾಸನದಪಿತಾಮಹ – ಪತಂಜಲಿ ಮಹರ್ಷಿ

30. ಭಾರತದ ವಿದೇಶಾಂಗ ನೀತಿಯ ಶಿಲ್ಪಿ – ಜವಹರಲಾಲ್ ನೆಹರೂ

31. ಕರ್ನಾಟಕ ಶಾಸ್ತ್ರೀಯ ಸಂಗೀತದಪಿತಾಮಹ – ಪುರಂದರದಾಸರು

32. ಆಧುನಿಕಕರ್ನಾಟಕದ ಶಿಲ್ಪಿ – ಸರ್.ಎಂ.ವಿಶ್ವೆಶ್ವರಯ್ಯ

33. ಭಾರತ ಶಾಸನದಪಿತಾಮಹ – ಅಶೋಕ

34. ಕರ್ನಾಟಕದ ಶಾಸನದಪಿತಾಮಹ – ಬಿ.ಎಲ್.ರೈಸ್

35. ಪ್ರತಿ ಸುಧಾರಣ ಚಳುವಳಿಯ ಪಿತಾಮಹ – ಇಗ್ಲೆಷಿಯಸ್ ಲಯೋಲ

36. ಸಂಸ್ಕೃತಿಕ ಭೂಗೋಳ ಶಾಸ್ತ್ರದಪಿತಾಮಹ – ಲಾಟಿನ್ ಸಾಚ್

37. ಗದ್ಯ ಶಾಸ್ತ್ರದಪಿತಾಮ – ಹಡಾಂಟೆ

38. ಪದ್ಯ ಶಾಸ್ತ್ರದಪಿತಾಮಹ – ಪೆಟ್ರಾರ್ಕ

39. ಭಾರತದ ನ್ಯೂಕ್ಲಿಯರಕಾರ್ಯಕ್ರಮದಪಿತಾಮಹ – ಹೋಮಿ ಜಹಾಂಗೀರ್ ಬಾಬಾ

40. ಭಾರತದಇತಿಹಾಸದ ಪಿತಾಮಹ – ಕಲ್ಹಣ

41. ಕರ್ನಾಟಕದ ಸಮಾಜ ಶಾಸ್ತ್ರದಪಿತಾಮಹ – ಎಂ.ಎನ್. ಶ್ರೀನಿವಾಸ್

42. ಭಾರತದ ಕ್ಷಿಪಣಿಗಳ ಪಿತಾಮಹ – ಎ.ಪಿ.ಜೆ.ಅಬ್ದುಲ್ ಕಲಾಂ

43. ನೀಲಿ ಕ್ರಾಂತಿಯಪಿತಾಮಹ – ಶ್ಯಾಮ ಪಿತ್ರೋಡಾ

44. ಕನ್ನಡದಕಾವ್ಯಪಿತಾಮಹ – ಪಂಪ

45. ಕನ್ನಡ ಚಳುವಳಿಯ ಪಿತಾಮಹ – ಅನ ಕೃಷ್ಣರಾಯ

46. ವಚನ ಸಂಪಾದನೆಯಪಿತಾಮಹ – ಫ.ಗು.ಹಳಕಟ್ಟಿ

47. ಕರ್ನಾಟಕದ ಪ್ರಹಸನದಪಿತಾಮಹ — ಟಿ.ಪಿ.ಕೈಲಾಸಂ

48. ಕಾದಂಬರಿಯಪಿತಾಮಹ — ಗಳಗನಾಥ

49. ಹೊಸಗನ್ನಡ ಸಾಹಿತ್ಯದಪಿತಾಮಹ – ಬಿ.ಎಮ್.ಶ್ರೀಕಂಠಯ್ಯ್

50. ಕರ್ನಾಟಕದಜಾನಪದ ಸಾಹಿತ್ಯದಪಿತಾಮಹ — ಜಿ.ಎಮ್.ಪರಮಶಿವಯ್ಯ್

51. ಆಧುನಿಕಕನ್ನಡ ನಿಘಂಟಿನಪಿತಾಮಹ — ಜಿ.ವೆಂಕಟಸುಬ್ಬಯ್ಯ್

52. ಕನ್ನಡ ಸಾಹಿತ್ಯದ ನವ್ಯ ನಾಟಕದಪಿತಾಮಹ — ಟಿ.ಪಿ.ಕೈಲಾಸಂ

53. ಫೇಸ ಬುಕನ ಪಿತಾಮಹ — ಮಾರ್ಕಜಂಗರ್ ಬರ್ಗ

54. ಇಂಗ್ಲಿಷಕಾವ್ಯದಪಿತಾಮಹ — ಜಿಯಾಪ್ರೈರಿಜಾಸೆರ್

55. ಆಧುನಿಕಯೋಗದಪಿತಾಮಹ – ಬೆಳ್ಳೂರು ಕೃಷ್ಣಮಾಚಾರ, ಸುಂದರ್‌ರಾಜ್‌ಅಯ್ಯಂಗಾರ್

56. ಕನ್ನಡದ ಸಣ್ಣ ಕಥೆಗಳ ಪಿತಾಮಹ – ಪಂಜೆ ಮಂಗೇಶರಾಯರು

57. ರಾಷ್ಟ್ರಪಿತಾಮಹ — ಮಹಾತ್ಮ ಪುಲೆ

58. ಆಧುನಿಕ ಶೈಕ್ಷಣಿಕ ಮನೋವಿಜ್ಞಾನದಪಿತಾಮಹ — ಥಾರ್ನಡೈಕ್

59. ಪಾಶ್ಚಿಮಾತ್ಯ ವೈದ್ಯ ಶಾಸ್ತ್ರದಪಿತಾಮಹ – ಹಿಪ್ಪೋಕ್ರೇಟ್ಸ

60. ಭಾರತದರಸಾಯನಿಕಪಿತಾಮಹ — 2 ನೆ ನಾಗಾರ್ಜುನ




ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತ ಸೈನಿಕರು

| | | |
|---|---|---|
| 1. ಮೇಜರ್ ಸೊಮನಾಥ ಶರ್ಮಾ | : | 1947 |
| 2. ಲಾನ್ಸ ನಾಯಕ್ ಕಮರ್ ಸಿಂಗ್ | : | 1948 |
| 3. ಸೇಕೆಂಡ್ ಲೆಫ್ಟಿನೆಂಟ್ ರಾಮ ರಾಘೋಬ ರಾಣೆ | : | 1948 |
| 4. ನಾಯಕ್ ಜಡೂನಾಥ ಸಿಂಗ್ | : | 1948 |
| 5. ಕಂಪನಿ ಹವಿಲ್ದಾರ್ ಮೇಜರ್ ಪೀರು ಸಿಂಗ್ | : | 1948 |
| 6. ಕ್ಯಾಪ್ಟನ್ ಗುರುಬಚನ್ ಸಿಂಗ್ ಸಲಾರಿಯಾ | : | 1961 |
| 7. ಮೇಜರ್ ಧಾನ್ ಸಿಂಗ್ ಥಾಪಾ | : | 1962 |
| 8. ಸುಬೇದಾರ್ ಜೋಗಿಂದರ್ ಸಿಂಗ್ | : | 1962 |
| 9. ಮೇಜರ್ ಶೈತಾನ ಸಿಂಗ್ | : | 1962 |
| 10. ಕಂಪನಿ ಕ್ವಾರ್ಟರ್ ಮಾಸ್ಟರ್ ಹವಿಲ್ದಾರ್ ಅಬ್ದುಲ್ ಹಮಿದ್ | : | 1965 |
| 11. ಲೆಫ್ಟಿನೆಂಟ್ ಕರ್ನಲ್ ಆರ್ದೆಶಿರ್ ತಾರಾಪುರ್ | : | 1965 |
| 12. ಲಾನ್ಸ ನಾಯಕ್ ಆಲ್ಬರ್ಟ ಎಕ್ಕಾ | : | 1971 |
| 13. ಫ್ಲೆಯಿಂಗ್ ಆಫಿಸರ್ ನಿರ್ಮಲಾಜಿತ್ ಸಿಂಗ್ ಸೆಖೋನ್ | : | 1971 |
| 14. ಲೆಫ್ಟಿನೆಂಟ್ ಅರುಣ ಖೆತ್ರಪಾಲ್ | : | 1971 |
| 15. ಮೇಜರ್ ಹೋಶಿಯಾರ್ ಸಿಂಗ್ | : | 1971 |
| 16. ನೈಬ್ ಸುಬೇದಾರ್ ಬಾಣಾ ಸಿಂಗ್ | : | 1987 |
| 17. ಮೇಜರ್ ರಾಮಸ್ವಾಮಿ ಪರಮೇಶವರನ್ | : | 1987 |
| 18. ಕ್ಯಾಪ್ಟನ್ ವಿಕ್ರಮ್ ಬಾತ್ರಾ | : | 1999 |
| 19. ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ | : | 1999 |
| 20. ಗ್ರೆನೇಡಿಯರ್ ಯೊಗೇಂದ್ರ ಸಿಂಗ್ ಯಾದವ್ | : | 1999 |
| 21. ರೈಫಲ್ ಮ್ಯಾನ್ ಸಂಜಯ ಕುಮಾರ | : | 1999 |



ದಿವ್ಯಜ್ಯೋತಿ
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಭಾರತದ ಮತ ಪ್ರವರ್ತಕರು

ಸುಮಾರು ಒಂಬತ್ತನೇ ಶತಮಾನದ ಭಾರತದಲ್ಲಿ ಅನೇಕ ಜಾತಿಗಳು, ಸಂಪ್ರದಾಯಗಳು ಮತ್ತು ದರ್ಶನಗಳು ಇದ್ದವು. ಪ್ರಖ್ಯಾತ ಧರ್ಮ ಸುಧಾರಕರು ಕಾಲಕಾಲಕ್ಕೆ ಸನಾತನ ಧರ್ಮವನ್ನು ತಮ್ಮ ತಮ್ಮ ದೃಷ್ಟಿಕೋನಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಇದರಿಂದ ಭಕ್ತಿ ಪಂಥ ಉದಯವಾಗಲು ಕಾರಣವಾಯಿತು.

ಶಂಕರಾಚಾರ್ಯರು:–

ಶಂಕರಾಚಾರ್ಯರು ಕೇರಳದ ಕಾಲಡಿ ಗ್ರಾಮದ ನಂಬೂದರಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಶಿವಗುರು, ತಾಯಿ ಆರ್ಯಾಂಬ. ಶಂಕರರ ಬುದ್ಧಿಶಕ್ತಿ ಬಹಳ ಚುರುಕಾಗಿತ್ತು. ತಮ್ಮ ಏಳನೇ ವಯಸ್ಸಿನಲ್ಲಿಯೇ ಎಲ್ಲಾ ಸೂತ್ರಗಳಲ್ಲಿಯೂ ಪಾಂಡಿತ್ಯವನ್ನು ಪಡೆದಿದ್ದರು. ಗೋವಿಂದ ಭಗವತ್ಪಾದರೆಂಬ ಗುರುಗಳಲ್ಲಿ ಇವರು ವೇದ–ಶಾಸ್ತ್ರಗಳ ಅಧ್ಯಯನವನ್ನು ನಡೆಸಿದರು.

ಶಂಕರರು ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳ ಆಳವಾದ ಅಧ್ಯಯನ ಮಾಡಿ, ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದರ ಪ್ರಕಾರ ಬ್ರಹ್ಮನೊಬ್ಬನೇ ಸತ್ಯ, ಉಳಿದ ಜಗತ್ತು ಮಿಥ್ಯ ರೂಪವಾದದ್ದು. ಜೀವನೂ ಬ್ರಹ್ಮನೇ ಮತ್ತು ಜೀವ ಬ್ರಹ್ಮನಿಂದ ಬೇರೆಯಲ್ಲ.

ಜಗತ್ತು ಒಂದು ಮಾಯೆ , ಬ್ರಹ್ಮ ಮಾತ್ರ ಸತ್ಯ. ಜನರು ಅಜ್ಞಾನಿಗಳು, ಅವರಿಗೆ ಜಗತ್ತು ಮಾಯೆ ಎಂಬುದು ಗೊತ್ತಿಲ್ಲ ಮತ್ತು ಬ್ರಹ್ಮನು ಸತ್ಯವೆಂಬುದೂ ಗೊತ್ತಿಲ್ಲ. ಆದ್ದರಿಂದ ಜ್ಞಾನ ಮಾರ್ಗದಿಂದ ನಾವು ಪ್ರಪಂಚದ ಮಾಯೆಯನ್ನು ತಿಳಿದು, ಪರಮ ಸತ್ಯವಾದ ಬ್ರಹ್ಮನೊಡನೆ ನಮ್ಮ ಜೀವಾತ್ಮವನ್ನು ವಿಲೀನಗೊಳಿಸಬೇಕು. ಆಗ ಮಾತ್ರ ನಮಗೆ ಮೋಕ್ಷವು ದೊರೆಯುವುದು. ಹೀಗೆ ಶಂಕರರು ಜ್ಞಾನ ಮಾರ್ಗವನ್ನು ಬೋಧಿಸಿದರು.

ಜೀವಾತ್ಮನಿಗೆ ಪ್ರತ್ಯೇಕ ಅಸ್ಥಿತ್ವವಿಲ್ಲವೆಂದು ಪ್ರತಿಪಾದಿಸಿದ ಶಂಕರರು ಇದನ್ನೇ ನಾನೇ ಬ್ರಹ್ಮನು ಅಥವಾ "ಅಹಂ ಬ್ರಹ್ಮಾಸ್ಮಿ" ಎಂಬುದಾಗಿ ಪ್ರತಿಪಾದಿಸಿದರು. ಬ್ರಹ್ಮವು ಸತ್ಯ, ಅದು ನಿರ್ಗುಣ, ಅದಕ್ಕೆ ಲಕ್ಷಣಗಳಿಲ್ಲ ಮತ್ತು ಆಕಾರವಿಲ್ಲ ಎಂದು ಪ್ರತಿಪಾದಿಸಿದರು.



ಶ್ರೀಹರಿ ಎಸ್.ಎಲ್
ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

## ಒಂದು ಡಾಲರಗೆ ಒಂದು ರೂಪಾಯಿ ಯಾವಾಗ?

### [ಈಗಿನ ಪರಿಹಾರ]

ದೀರ್ಘಕಾಲದ – ಮಧ್ಯಾವಧಿಯ ಯೋಜನೆಗಳನ್ನು ಸರ್ಕಾರವುಈಗಾಗಲೇ ಆರಂಭಿಸಿದೆ. ನಮ್ಮಲ್ಲೀಗ ಸಕ್ಕರೆ ಸುಗ್ಗಿ ಭಾರಿಯಾಗಿದೆ. ಸಕ್ಕರೆ ರಪ್ತು ಮಾಡಲು ಸಬ್ಸಿಡಿ ಕೂಡ ಇದೆ! ಡಾಲರ್ ಸಂಪಾದಿಸಲು ಸಕ್ಕರೆ ರಪ್ತು ಮಾಡಬೇಕು! ಈ ದಿಸೆಯಲ್ಲಿ ಸರ್ಕಾರ ಇಟ್ಟಿರುವ ಮಹತ್ವಾಕಾಂಕ್ಷೆಯ ಹೆಜ್ಜೆಯೆಂದರೆ ಕಬ್ಬಿನ ಗದ್ದೆಯನ್ನು ತೈಲಬಾವಿಯನ್ನಾಗಿ ಮಾಡುವುದು. ಷುಗರ್ ಫೀಲ್ಡ್ ಅನ್ನು ಆಯಿಲ್ ಫೀಲ್ಡ್ ಮಾಡುವುದು, ಸಕ್ಕರೆ ಬೇಕಾದಷ್ಟಿದೆ. ಕಬ್ಬಿನ ರಸದಿಂದ ಎಥೆನಾಲ್ ಮಾಡಿ ಅದನ್ನು ಪೆಟ್ರೋಲ್‌ಗೆ ಬೆರಸಿ ಎಂದು ಸರ್ಕಾರ ಹೆಜ್ಜೆ ಇಟ್ಟಿದೆ. ಇದಕ್ಕಾಗಿ ಸಕ್ಕರೆ ಕಾರ್ಖಾನೆಗಳಿಗೆ ಏಥೆನಾಲ್ಗೆ ಲೀಟರಗೆ 43,46 ರೂಪಾಯಿ ಬೆಲೆ ಎಂದು ನಿಗದಿಯಾಗಿದೆ. ಈಗ ನಮ್ಮಲ್ಲಿ ಪೆಟ್ರೋಗೆ 10%ಎಥೆನಾಲ್ ಇರಲಿಲ್ಲ ಇದು ಏನೇನು ಸಾಲದು, ಏಕೆಂದರೆ ಜಗತ್ತಿನ ಸಕ್ಕರೆ ಸೀಮೆ ಎನಿಸಿದ ಬ್ರೆಜಿಲ್‌ನಲ್ಲಿ ಪೆಟ್ರೋಲ್ಗೆ ಶೇ80 ರಷ್ಟು ಎಥೆನಾಲ್ ಬಳಸಲಗುತ್ತದೆ, ನಮ್ಮಲ್ಲೂ ಹೀಗಾದ ಪಕ್ಷ ತೈಲಕ್ಕಾಗಿ ಪರಾವಲಂಬನೆ ಕಡಿಮೆ ಆಗುತ್ತದೆ. ರೂಪಾಯಿ ಕುಸಿತ ನಿಲ್ಲುತ್ತದೆ. ಇದಲ್ಲದೆ ಸರ್ಕಾರವು ಇನ್ಮುಂದೆ ಸಗಣಿ ಮತ್ತು ನಗರಗಳ ಹಸಿಕಸ ಬಳಸಿ ಗೋಬ್ಬರ್ ಗ್ಯಾಸ್ ತಯಾರಿಸಲು ಗೋಬ್ಬರ್ ಟನ್ ಗೋಬ್ಬರ್ ಗ್ಯಾಸ್ ತಯಾರಿಸಿದೆ, ಆಗ ಸಿಲಿಂಡರ್ಗಳ್ಳಲಿ ಗ್ರಾಹಕರಿಗೆ ಲಭಿಸುತ್ತದೆ.ಈ ಪ್ರಮಾಣವು ನಮಗೆ ಈಗ ಪರೈಕೆಯಾಗುತ್ತಿರುವ ಅನಿಲದಲ್ಲಿ ಶೇ,40% ಆಗುತ್ತದೆ.46 ರೂಪಾಯಿ ಒಂದು ಕೆ,ಜಿ.ಗೆ ಬೆಲೆ ಎಂದು ನಿಗದಿ ಆಗಿದೆ. ಇವು ಮಹತ್ವದ ಹಳ್ಳಿಗರ ಆರ್ಥಿಕಬಲ ಹೆಚ್ಚಿಸುತ್ತವೆ, ತೈಲಬೆಲೆ ಹತೋಟಿ ಮುಂದಿನ ವರ್ಷಗಳಲ್ಲಿ ನಮ್ಮಲ್ಲಿ ಸಾಧ್ಯವಾಗಬಹುದು ಎಂಬ ಆಶಾಭಾವನೆ ಇದರಿಂದ ಮೂಡುತ್ತದೆ.



ಮುದ್ದರಾಜ, ಬಿ.
ಎರಡನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ
ಸದಸ್ಯರು – ಸಮಾಜ ವಿಜ್ಞಾನ ಸಂಘ

**Anegudde Lord Shri Vinayaka Temple**

Guddattu Vinayaka temple is one of the famous holy place in kundapura. It is located about 15k.m. from kundapura in Udupi district, the temple is dedicated to lord Ganesh and the Unique part is that the deity is a part of natural rock formaton and is a self manifested one. Abrightly colored large arch made up in shades of yellow, pink, orange and red with a Ganesh idol in the middle flanked by Elephants with raised trunks on either side takes you to the entrance of temple of the temple. Set amidest vibrant greenery with Swamying coconut trees and lush rural paddy farms, the temple itself is a simple structure and the rurd charms is hard to miss.

This is the only Jaladhivasa Ganapathi in the country. The temple is on the foot of a huge granite rack that appears like a sleeping elephant. The temple states back to many thousand years and the idol is not very clear, but on close, observation we see the lord setting in a cross legged position with a twisted trunk. The lord is always kept immersed in water and there is an interesting story behind this practice. In olden days, there was a demon named tripurasure who has all the three worlds under his control. In order to vanquish him , all the 33,000 crore goods and goddess along with Brahma, Vishnu and Shiva came together to edvise a strategy, it is said that lardshiva ked this effort after praying to Ganesha. The god of auspicious beginnings, the team set of to vanquish the demon. It could not kill him, Lord Shiva felt that this was coused by Ganesha and fired another arrow at this own son. But the arrow could not come back either, it apparently took Ganesha, into one of the Sapta Sagara, called the Madhu Sagara Ganesha who loved honey, drained the occen of its honey and bessed Shiva, who then on to kill the demon.



Ashwini SM
Second Semester - B.Ed., Student Teacher
Member, Social Science Club

## Ibrahim Rauza

Bijapura officially known as Vijayapura, is the district headquarters of Bijapura. The Ibrahim Rouza and the Gol Gumbaz are the most impressive monuments at Bijapur. This is also known as the Ibrahim Rouza which is the tomb complex where Ibrahim. Adil shah it is buried along with his wife. It is built as the tomb for Ibrahim Shah just outside he city walls of Bijapur to the west. It is one of the brilliant specimen of Muslims. Ibrahim Souza is tomb of Ibrahim II which his two som and his mother on the left and on the right side with a mosque set it is a another of the Adil Shahi us full of architecture.

Ibrahim Rouza is one of the top five historical monuments in the heritage city of India Bijapur. The meaning of the word Rouze is said to be tomb and the name of is given to the structure be cause is houses the tomb of Ibrahim of Adil Shahi dynasty. The architectural styles developed by the sultans of the deccon platen that are appreciated in Bijapur, Bidar. Dispet its history ad significance the exquisite structure is now surrounded by fifth dirt and stagnating it is consists of two core construction a tomb and a mosque with several smaller structures. This style developed by the Bidar, Gulbarga, Hydrabad. It was built on 1627, it is a fine square structure with twin building with delicate carriage.

Ibrahim Rouza regurarly alluded to as "the Taj Mahal of the Deccan" was planned by Malik Sandal citadel of Bijapur showing the location of ali riza compressed plan stanched.



Faseea
Second Semester - B.Ed., Student Teacher
Member, Social Science Club